ವಿಜಯಪುರ | ಸಂಪುಟ 01 | ಸಂಚಿಕೆ 312 | ಪುಟ 4 | ₹ 3.00

https://udayarashminews.com

udayarashmi 7026028778

# ಉದಯ ರಶ್ಮಿ


ಜನಪರ-ಜೀವಪರ

ಸಂಪಾದಕ : ಇಂದುಶೇಖರ ಮಣೂರ

ಕನ್ನಡ ದಿನಪತ್ರಿಕೆ

editor.udayarashmi@gmail.com RNI NO: KARKAN/2023/86203 ಗುರುವಾರ, ಫೆಬ್ರವರಿ 08, 2024

“ಸತ್ಯದ ಮುಂದೆ ಸೃಷ್ಟಿಯಾಗುವ ಸುಳ್ಳು ಅಲ್ಪಾಯುಷಿ. ಸ್ವತಂತ್ರ ಭಾರತದ ಇತಿಹಾಸದಲ್ಲೇ ಪ್ರಧಾನಿ ನರೇಂದ್ರ ಅವರ ನೇತೃತ್ವದ ಕೇಂದ್ರ ಸರ್ಕಾರ ಕೊಟ್ಟಷ್ಟು ಅನುದಾನಗಳು ಹಾಗೂ ಅಭಿವೃದ್ಧಿಗೆ ನೀಡಿದ ಭರಪೂರ ಕೊಡುಗೆಗಳನ್ನು ಈವರೆಗೂ ಯಾರೂ ನೀಡಿಲ್ಲ.”




– ಬಿ.ವೈ.ವಿಜಯೇಂದ್ರ
ಬಿಜೆಪಿ ರಾಜ್ಯಾಧ್ಯಕ್ಷರು

## ಕಾಂಗ್ರೆಸ್ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್

# ಕರ್ನಾಟಕ ಕಾಂಗ್ರೆಸ್ ಸರ್ಕಾರದಿಂದ ಸುಳ್ಳು ನಿರೂಪಣೆ!

ನವದೆಹಲಿ: ಕಾಂಗ್ರೆಸ್ ನೇತೃತ್ವದ ಕರ್ನಾಟಕ ಸರ್ಕಾರವು ‘ಪ್ರತ್ಯೇಕತಾವಾದಿ’ ಮನಸ್ಥಿತಿಯನ್ನು ಹೊಂದಿದೆ. ಅನುದಾನ ಹಂಚಿಕೆಯಲ್ಲಿ ರಾಜ್ಯದ ವಿರುದ್ಧ ಕೇಂದ್ರದ ತಾರತಮ್ಯದ ಬಗ್ಗೆ ‘ಸುಳ್ಳು ನಿರೂಪಣೆ’ ಯನ್ನು ಹರಡುತ್ತಿದೆ ಎಂದು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಬುಧವಾರ ನವದೆಹಲಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು

ಕಾಂಗ್ರೆಸ್ ನೇತೃತ್ವದ ಕರ್ನಾಟಕ ಸರ್ಕಾರವು ‘ಪ್ರತ್ಯೇಕತಾವಾದಿ’ ಮನಸ್ಥಿತಿಯನ್ನು ಹೊಂದಿದೆ. ಅನುದಾನ ಹಂಚಿಕೆಯಲ್ಲಿ ರಾಜ್ಯದ ವಿರುದ್ಧ ಕೇಂದ್ರದ ತಾರತಮ್ಯದ ಬಗ್ಗೆ ‘ಸುಳ್ಳು ನಿರೂಪಣೆ’ ಯನ್ನು ಹರಡುತ್ತಿದೆ ಎಂದು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ತೆರಿಗೆ ಹಂಚಿಕೆಯಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಅನ್ಯಾಯವಾಗಿದೆ. ಬರ ಪರಿಹಾರ ನೀಡುವಲ್ಲಿಯೂ ವಿಳಂಬವಾಗಿದೆ ಎಂದು ಆರೋಪಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಕರ್ನಾಟಕದ ಕಾಂಗ್ರೆಸ್ ನಾಯಕರು ಇಲ್ಲಿನ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸಿದ್ದರು. ಈ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ



ನೇತೃತ್ವದ ಕಾಂಗ್ರೆಸ್ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡ ನಿರ್ಮಲಾ ಸೀತಾರಾಮನ್ ಅವರು, ಕರ್ನಾಟಕ ಸಿಎಂ ಸಿದ್ದರಾಮಯ್ಯ 13 ಬಾರಿ ರಾಜ್ಯ ಬಜೆಟ್ ಮಂಡಿಸಿರುವುದ–ರಿಂದ ಸಾರ್ವಜನಿಕ ಹಣಕಾಸು ಹೇಗೆ ವೆಚ್ಚವಾಗುತ್ತದೆ ಎಂದು ಚೆನ್ನಾಗಿ ತಿಳಿದಿದೆ ಎಂದು ಭಾವಿಸಿದ್ದೆ, ಆದರೆ ಅವರು ಅದಕ್ಕೆ ವಿಷಪೂರಿತ ನಿರೂಪಣೆಯನ್ನು ಸೇರಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾಂಗ್ರೆಸ್ ಗೆ ತನ್ನ ಗ್ಯಾರಂಟಿಗಳನ್ನು ಈಡೇರಿಸಲು ಸಾಧ್ಯವಿಲ್ಲ ಎಂದು ತಿಳಿದಿದೆ. ಹೀಗಾಗಿ ಅದು ತನ್ನ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಮತ್ತು ಗಮನವನ್ನು ಬೇರೆಡೆ ಸೆಳೆಯಲು ಸುಳ್ಳು ವಾದಗಳನ್ನು ಮಂಡಿಸುತ್ತಿದೆ ಎಂದು ಕೇಂದ್ರ ಹಣಕಾಸು ಸಚಿವ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಈ ಐದು ಖಾತ್ರಿಗಳು ಸರ್ಕಾರಕ್ಕೆ ಭಾರಿ ಆರ್ಥಿಕ ಹೊರೆಯಾಗಿ ಪರಿಣಮಿಸಿವೆ ಎಂದು ಇದೇ ಜನವರಿ 9ರಂದು ಸಿಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಹೇಳಿಕೆ ನೀಡಿದ್ದರು. ಗೆದ್ದಿದ್ದೇವೆ ಆದರೆ ಭರವಸೆ ಈಡೇ–ರಿಸಲು ಸಾಧ್ಯವಿಲ್ಲ ಎಂದು ರಾಜ್ಯ ಸರ್ಕಾರಕ್ಕೆ ಅರಿವಾಗುತ್ತಿದೆ. ಕೇಂದ್ರವನ್ನು ದೂಷಿಸುವುದು ಕರ್ನಾಟಕದ ಜನತೆಗೆ ತೋರಿಸುವುದು. ಪ್ರಚಾರದ ಸಮಯದಲ್ಲಿ, ನಮ್ಮಲ್ಲಿ ಹಲವರು ವಾರ್ಷಿಕವಾಗಿ ಸುಮಾರು 60,000 ಕೋಟಿಗಳಷ್ಟು ವೆಚ್ಚವಾಗುತ್ತದೆ ಎಂದು ಹೇಳಿದ್ದರು.

ನಿಮ್ಮ ತೆರಿಗೆ ಹಣ ನಮಗೆ ಬೇಡ, ಪ್ರತ್ಯೇಕ ರಾಜ್ಯ ಕೊಡಿ ಎಂದು ಡಿ.ಕೆ ಶಿವಕುಮಾರ್ ಸಹೋದರ ಸಂಸದ ಡಿಕೆ ಸುರೇಶ್ ಹೇಳಿಕೆಯನ್ನು ಪ್ರಸ್ತಾಪಿಸಿದ ನಿರ್ಮಲಾ ಸೀತಾರಾಮನ್ ವಿರೋಧ ಪಕ್ಷವನ್ನು ಕೆಣಕಿದರು.

ಕರ್ನಾಟಕಕ್ಕೆ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ತೋರುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಕಳೆದ ಐದು ವರ್ಷಗಳಲ್ಲಿ ಕರ್ನಾಟಕ ಅನುಭವಿಸಿದ 1.87 ಲಕ್ಷ ಕೋಟಿ ರೂಪಾಯಿ ನಷ್ಟಕ್ಕೆ ಪರಿಹಾರ ನೀಡಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಈ ಬಗ್ಗೆ ದೆಹಲಿಯ ಜಂತರ್ ಮಂತರ್ ನಲ್ಲಿ ಕರ್ನಾಟಕ ಸರ್ಕಾರ ಪ್ರತಿಭಟನೆ ನಡೆಸುತ್ತಿದೆ. ಮುಖ್ಯಮಂತ್ರಿ ಸೇರಿದಂತೆ ಸಂಪುಟದ ಎಲ್ಲ ಸಚಿವರು ಭಾಗಿಯಾಗಿದ್ದರು.

### ರಾಜ ನುಡಿ

ಹಿರಿಯರು ಹೇಳಿದಂತೆ ಪೂಜೆ, ನಮಾಜ್, ಪ್ರೇಯರ್ ಗಳಲ್ಲಿ ಅವನನ್ನ ತುಂಬಾ ಹುಡುಕಿದೆ ಕೊನೆಗೆ ಅವನು ಸಿಕ್ಕಿದ್ದು ಪ್ರೇಮ, ಸೇವೆ, ಸ್ನೇಹ, ಸಹಾಯ, ಸಹಾನುಭೂತಿಯಲ್ಲಿ. ಎಲ್ಲೋ ಇರುವುದನ್ನು ಇನ್ನೆಲ್ಲೋ ಹುಡುಕುತ್ತಾ ಜೀವನ ಮುಗಿಸುತ್ತೇವೆ.

–ಡಾ. ರಾಜಶೇಖರ ನಾಗೂರ

## ಬಿಜೆಪಿ ರೈತ ಮೋರ್ಚಾ ಜಿಲ್ಲಾ ಅಧ್ಯಕ್ಷ ಕಾಸುಗೌಡ ಬಿರಾದಾರ ಗಂಭೀರ ಆರೋಪ

# ಭೀಮಾಶಂಕರ ಸಕ್ಕರೆ ಕಾರ್ಖಾನೆ ಮೇಲೆ ರೂ.278 ಕೋಟಿ ಸಾಲ!

ಉದಯರಶ್ಮಿ ನ್ಯೂಸ್

ಇಂಡಿ: ಭೀಮಾಶಂಕರ ಕಾರ್ಖಾನೆಯ ಮೇಲೆ ಕಳೆದ ಐದು ವರ್ಷಗಳಲ್ಲಿ 278 ಕೋಟಿ ರೂ ಸಾಲ ಪಡೆದಿದ್ದು, 143 ಕೋಟಿ ರೂ ಹಾನಿಯಾಗಿದೆ ಮತ್ತು ಪ್ರತಿ ವರ್ಷ 28 ಕೋಟಿ ರೂ ನಷ್ಟವಾಗಿದೆ ಎಂದು ಬಿಜೆಪಿ ರೈತ ಮೋರ್ಚಾ ಜಿಲ್ಲಾ ಅಧ್ಯಕ್ಷ ಕಾಸುಗೌಡ ಬಿರಾದಾರ ಆರೋಪಿಸಿದರು.

ಅವರು ಭೀಮೆಯ ದಡದಲ್ಲಿ ಭೀಮಾಶಂಕರ ಕಾರ್ಖಾನೆ ಚುನಾವಣೆ ಪ್ರಚಾರಾರ್ಥ ಡಾ॥ ಸಾರ್ವಭೌಮ ಬಗಲಿ, ನಾಗನಾಥ ಬಿರಾದಾರ, ಮುತ್ತಪ್ಪ ಪೋತೆ ಅಭ್ಯರ್ಥಿಗಳ ಗುಂಪಿನಿಂದ ನಡೆದ ಪಟ್ಟಣದ ಅಮರ ಇಂಟರ್ ನ್ಯಾಶನಲ್ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಕಬ್ಬು ಕಟಾವು ಮಾಡುವಾಗ ಕಬ್ಬು ಸಾಗಿಸುವ ಅಥವಾ ಕಾರ್ಖಾನೆಯಲ್ಲಿ ಕಬ್ಬು ನುರಿಸುವಾಗ ಅಪಘಾತ



ಸಂಭವಿಸಿ ರೈತರು ಕಾರ್ಮಿಕರು ಮೃತ ಪಟ್ಟರೆ ಅವರಿಗೆ 5 ಲಕ್ಷ ಪರಿಹಾರವನ್ನು ನೀಡಲಾಗುವದು, ಮತ್ತು ಅಪಘಾತಗೊಂಡು ಆಸ್ಪತ್ರೆಗೆ ದಾಖಲಾದರೆ ಅವರ ವೈದ್ಯಕೀಯ ವೆಚ್ಚವನ್ನು ಕಾರ್ಖಾನೆಯಿಂದ ಭ–ರಿಸಲಾಗುವದು, ಜಮೀನಿನಲ್ಲಿ ಬೆಳೆದಿರುವ ಕಬ್ಬು ವಿದ್ಯುತ್ ಹಾಗೂ ಬೆಂಕಿಯಿಂದ ಸುಟ್ಟರೆ ಕೂಡಲೇ ಇಂತಹ ಕಬ್ಬನ್ನು ಕೂಡಲೇ ಕಾರ್ಖಾನೆಗೆ ಸಾಗಿಸಲಾಗುವದು ಎಂದರು.

ಜೆಡಿ ಎಸ್ ಮುಖಂಡ ಬಿ.ಡಿ.ಪಾಟೀಲ ಮಾತನಾಡಿ ಕಾರ್ಖಾನೆಯಲ್ಲಿ ಈಥನಾಲ ಉತ್ಪಾದನೆ ಪ್ರಾರಂಭಿಸಿ ಮತ್ತು ಮಳ್ಳಿ ಬೂದಿ, ವಿದ್ಯುತ್ ಉತ್ಪಾದನೆಯಿಂದ ಬಂದ ಲಾಭಾಂಶ ರೈತರಿಗೆ ಹಂಚಲಾಗುವದು, ಕಾರ್ಖಾನೆಯ ಪ್ರತಿ ಷೇರುದಾರರಿಗೆ 50 % ಸಬ್ಸಿಡಿ ದರದಲ್ಲಿ ಪ್ರತಿ ವರ್ಷ 50 ಕೆಜಿ ಸಕ್ಕರೆ ವಿತರಣೆ, ಕಬ್ಬಿನ ತೂಕಕ್ಕೆ ಸರಕಾರದಿಂದ ಇಲೆಕ್ಟ್ರಾನಿಕ್ ತೂಕದ ಮಷೀನು, ಜಿಲ್ಲೆಯಲ್ಲಿ ಸಹಕಾರಿ ಕಾರ್ಖಾನೆಗಳು ಕಬ್ಬಿಗೆ ನೀಡುತ್ತಿರುವ ದರಕ್ಕಿಂತ ಹೆಚ್ಚಿನ 100 ರೂ ಹೆಚ್ಚಿನ ದರವನ್ನು ನೀಡಲಾಗುತ್ತದೆ ಎಂದರು.

ಶ್ರೀಶೈಲಗೌಡ ಬಿರಾದಾರ ಮಾತನಾಡಿ, ಸಧ್ಯ ಕಾರ್ಖಾನೆಯಲ್ಲಿ ಶೇ 55 ಹೆಚ್ಚು ಬೇರೆ ರಾಜ್ಯದ ಉದ್ಯೋಗಿಗಳಾಗಿದ್ದು, ಅದನ್ನು ಸ್ಥಳೀಯ ರೈತರ ಮಕ್ಕಳಿಗೆ ನೀಡಲಾಗುವದು ಮತ್ತು ಮಹಿಳಾ ಉದ್ಯೋಗಿಗಳ ಪ್ರಮಾಣ ಅತೀ ಕಡಿಮೆ ಇದ್ದು ಶೇ 33 ರಷ್ಟು ಮಹಿಳಾ ಉದ್ಯೋಗಿಗಳನ್ನು ತುಂಬಲಾಗುವದು ಎಂದರು.

ಎಸ್.ಬಿ.ಐ ನಿವೃತ್ತ ಸಿಬ್ಬಂದಿ ಮುಕುಂದ ಕಾಂಬಳೆ ಮಾತನಾಡಿದರು.

ಭೀಮಾಶಂಕರ ಕಾರ್ಖಾನೆಯ ಚುನಾವಣೆಯಲ್ಲಿ ಸ್ಪರ್ಧಿಸಿದ ಮಾಜಿ ಶಾಸಕ ಡಾ॥ ಸಾರ್ವಭೌಮ ಬಗಲಿ, ನಾಗನಾಥ ಬಿರಾದಾರ, ಮುತ್ತಪ್ಪ ಪೋತೆ ಮಾತನಾಡಿ, ಭೀಮಾಶಂಕರ ಕಾರ್ಖಾನೆಯಲ್ಲಿ ಆಗುತ್ತಿರುವ ಸೋ–ರಿಕೆ ತಡೆದು ಮೂವರೂ ಪ್ರಭಲ ಶಕ್ತಿಯಾಗಿ ಕಾರ್ಖಾನೆಯನ್ನು ಹಾನಿಯಿಂದ ಲಾಭದ ಕಡೆಗೆ ತೆಗೆದುಕೊಂಡು ಹೋಗುವುದಾಗಿ ಭರವಸೆ ನೀಡಿದರು.

### ವಚನ ಚಿಂತನ 296



ನಿಘೂಡ ಬಯಲು

*ಬಯಲಿಂದಲೆ ಹುಟ್ಟಿ, ಬಯಲಿಂದಲೆ ಬೆಳೆದು,*
*ಬಯಲಾಮೃತವನೆ ಉಂಡು,*
*ಬಯಲನೆ ಉಟ್ಟು, ಬಯಲನೆ ತೊಟ್ಟು,*
*ಬಯಲು ಬಯಲೊಳಗೆ ಬೆರೆದ ಭೇದವ,*
*ಈ ಭುವನದೊಳಗೆ ಇಪ್ಪ ಭವಭಾರಿಗಳು ಎತ್ತಬಲ್ಲರು,*
*ಭವವಿರಹಿತ ಶರಣರ ನಿಲವ, ಬಸವಪ್ರಿಯ ಕೂಡಲಚನ್ನಬಸವಣ್ಣಾ ?*
*– ಹಡಪದ ಅಪ್ಪಣ್ಣನವರು*

ರೂಪಿನಿಂದಾಚೆಯ ಬಯಲಿನಲ್ಲಿ ದೇವರ ನೈಜ ಸ್ವರೂಪವನ್ನು ಕಂಡ 12ನೇ ಶತಮಾನದ ಶರಣರು ಅಂದು ವಸ್ತು, ವ್ಯಕ್ತಿಗಳಲ್ಲಿ ದೇವರಿರುವನೆಂದು ನಂಬಿಸಿ ಮೊಸಗೊಳಿಸುವವರಿಂದ ಜನಸಾಮಾನ್ಯರನ್ನು ಎಚ್ಚರಿಸುವ ಕಳಕಳಿಯನ್ನು ಹಡಪದ ಅಪ್ಪಣ್ಣನವರ ಈ ವಚನದಲ್ಲಿ ನಾವು ಕಾಣುತ್ತೇವೆ. ಬಯಲಿನಿಂದ ಉದಯಿಸಿದ ಈ ಅಂಗ/ಆತ್ಮ/ಜೀವ/ಪ್ರಾಣವು ಬಯಲಿನಲ್ಲಿ ಬೆಳೆದು ಅಳಿದು ಇಲ್ಲವಾಗುವ ಪ್ರಕ್ರಿಯೇ ಬದುಕು. ಈ ಬದುಕನ್ನು ರೂಪಿಸಿ ಮುನ್ನೆಡೆಸುತ್ತಿರುವ ಚೈತನ್ಯ(ಮಹಾಲಿಂಗ)ದ ಸ್ವರೂಪವನ್ನು ಈ ಭುವನದೊಳಗಿಪ್ಪ ಭವಭಾರಿಗಳು ಎತ್ತಬಲ್ಲರು ಎಂದಿದ್ದಾರೆ. ಆದರೆ ಈ ನಿಗೂಢ ಅಂತಿಮ ಸತ್ಯವನ್ನು ತಾವು(ಭವವಿರಹಿತ ಶರಣ)ಮಾತ್ರ ಅರಿತಿರುವುದಾಗಿ ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಅಂದಿನಿಂದ ಇಂದಿನವರೆಗೂ ಬಯಲು ಎಂಬುದು ವಿಜ್ಞಾನಿಗಳು ಮತ್ತು ದಾರ್ಶನಿಕರಿಗೆ ಅತ್ಯಂತ ನಿಗೂಢ ಮತ್ತು ಆಸಕ್ತಿದಾಯಕ ವಿಷಯವಾಗಿದೆ. ವಿಜ್ಞಾನಿಗಳ ಸಂಶೋಧನೆ ಪ್ರಕಾರ ಈ ಬಯಲೆಂಬುದು (ಠಿಚಿಛಿಜ). ಬೆಳಕಿನ ಮಿತಿಗಳನ್ನು ಮೀರಿದ ಜಾಗ, ಅದನ್ನು ನಾವು ನೋಡಲಾಗುವುದಿಲ್ಲ. ಬ್ರಹ್ಮಾಂಡವನ್ನೊಳಗೊಂಡ ಖಾಲಿ ಜಾಗವನ್ನು ವಿಜ್ಞಾನಿಗಳು ಬಯಲೆನ್ನುತ್ತಾರೆ ಅದರ ವ್ಯಾಸವು ಕನಿಷ್ಠ 93 ಶತಕೋಟಿ ಜ್ಯೋತಿರ ವರ್ಷಗಳು(8.80 ×1026 metres l y)ಆದರೆ ಶರಣರ ಬಯಲು ಇದನ್ನು ಮೀರಿದವಿಸ್ತಾರವನ್ನು ಹೊಂದಿದೆ. ಅದು ಅಗಮ್ಯ, ಅನಂತ, ಅಪರಿಮಿತ, ಅಪ್ರಮಾಣ. ಈ ಭುವನದೊಳಗೆ ಇಪ್ಪ ಭವಭಾರಿಗಳು ಎತ್ತಬಲ್ಲರು, ಇಂಥ ಬಲಯ ಸ್ವರೂಪದ ಶರಣನ ನಿಲುವ ವೆಂದಿದ್ದಾರೆ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

## ಫೆ.12ರಂದು ನೀರು ಹರಿಸುವ ಭರವಸೆ | ನೀರು ಹರಿಸದಿದ್ದರೆ ಫೆ.13 ರಿಂದ ಉಪವಾಸ ಸತ್ಯಾಗ್ರಹದ ಎಚ್ಚರಿಕೆ

# ಕೆರೆಗಳ ಭರ್ತಿಗೆ ಆಗ್ರಹಿಸಿ ರೈತ ಸಂಘದ ಪ್ರತಿಭಟನೆ

ಉದಯರಶ್ಮಿ ನ್ಯೂಸ್

ಆಲಮಟ್ಟಿ: ಜಲಾಶಯದ ವ್ಯಾಪ್ತಿಗೆ ಬರುವ ಜಿಲ್ಲೆಯ ಎಲ್ಲ ಕೆರೆಗಳನ್ನು ಭರ್ತಿ ಮಾಡುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಮತ್ತು ಅಖಂಡ ಕರ್ನಾಟಕ ರೈತ ಸಂಘ ಜಂಟಿಯಾಗಿ ಬುಧವಾರ ಪ್ರತಿಭಟನೆ ನಡೆಸಿದರು.

ಇಲ್ಲಿಯ ರಾಮಲಿಂಗೇಶ್ವರ ದೇವಸ್ಥಾನದಿಂದ ಮುಖ್ಯ ಎಂಜಿನಿಯರ್ ಕಚೇರಿಯವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ ಅಲ್ಲಿ ಮುಖ್ಯ ಎಂಜಿನಿಯರ್ ಅವರಿಗೆ ಎರಡೂ ಸಂಘಟನೆಗಳು ಮನವಿ ಅರ್ಪಿಸಿದರು.


ಅಖಂಡ ಕರ್ನಾಟಕ ರೈತ ಸಂಘದ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಹಾಗೂ ರೈತ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ನಿಂಗರಾಜ ಆಲೂರ ಮಾತನಾಡಿ, ಆಲಮಟ್ಟಿ ಜಲಾಶಯದಿಂದ ಕಾಲುವೆಗಳಿಗೆ ನೀರು ಹರಿಸಿ ಜಿಲ್ಲೆಯ ಎಲ್ಲಾ ಕೆರೆಗಳನ್ನು ಭರ್ತಿ ಮಾಡಬೇಕು, ಈ ಮೊದಲು ಹರಿಸಿದ ನೀರಿನಿಂದ



ಕೆರೆಗಳ ಸಾಮರ್ಥ್ಯದ ಶೇ 30 ರಷ್ಟು ಮಾತ್ರ ಕೆರೆಗಳು ಭರ್ತಿಯಾಗಿವೆ. ಫೆಬ್ರುವರಿಯಲ್ಲಿಯೇ ಬಿಸಿಲಿನ ಪ್ರಖರತೆ ಹೆಚ್ಚಿದೆ. ಅಂತರ್ಜಲ ಮಟ್ಟ ಕುಸಿಯುತ್ತಿದೆ. ಜನ, ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆಯಾಗಿದೆ. ಯಾವುದೇ ನೆಪ ಹೇಳದೆ ಕಾಲುವೆಗೆ ನೀರು ಹರಿಸಬೇಕು ಎಂದರು. ಇಲ್ಲದಿದ್ದರೇ ಉಪವಾಸ ಸತ್ಯಾಗ್ರಹ ನಡೆಸಲಾಗುವುದು ಎಂದರು. ಪ್ರತಿಭಟನೆ ವೇಳೆ ಕೆಬಿಜೆಎನ್ಎಲ್ ಅಧಿಕಾರಿ ಹಾಗೂ ರೈತರ ಮಧ್ಯೆ ವಾಗ್ವಾದ ನಡೆಯಿತು. ಪ್ರತಿಭಟನೆ ಮುಂದುವರೆದಾಗ ಮುಖ್ಯ ಎಂಜಿನಿಯರ್ ಎಚ್.ಎನ್. ಶ್ರೀನಿವಾಸ ಪ್ರಾದೇಶಿಕ ಆಯುಕ್ತರೊಂದಿಗೆ ಮಾತನಾಡಿ, ಫೆ.12 ರಂದು ನೀರು ಹರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ನೀರು ಹ–ರಿಸದಿದ್ದರೆ ಫೆ.13 ರಿಂದಲೇ ಉಪವಾಸ ಸತ್ಯಾಗ್ರಹ ಆರಂಭಿಸುವುದಾಗಿ ರೈತ ಮುಖಂಡರು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಸದಾಶಿವ ಬರಟಗಿ, ರೈತ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಸೀತಪ್ಪ ಗಣಿ, ರಾಚಪ್ಪ ಉಕ್ಕಲಿ, ವೆಂಕಟೇಶ ವಡ್ಡರ, ಹೊನಕೇರಪ್ಪ ತೆಲಗಿ, ಲಕ್ಷ್ಮಣಗೌಡ ಬಿರಾದಾರ, ಮಾಧುರಾಯಗೌಡ ಬಿರಾದಾರ, ಸಂತೋಷ ಪಾಟೀಲ, ಈರಣ್ಣ ದೇವರಗುಡಿ, ವಿಠ್ಠಲ ಬಿರಾದಾರ, ರಮೇಶ ಗೌಡರ, ಸಂತೋಷ ಪಾಟೀಲ, ಸುಭಾಷ ಚೋಪಡೆ, ರಾಜು ನದಾಫ್, ಲಕ್ಷ್ಮಣ, ರ್ಯಾವಪ್ಪಗೌಡ ಪೊಲೇಶಿ, ರಾಮಣ್ಣ, ಪಾರ್ವತಿ ಲಮಾಣಿ, ಶಾಂತಾಬಾಯಿ ಮಡಿವಾಳರ, ತಾಯವ್ವ ಸೇರಿದಂತೆ ಹಲವರು ಇದ್ದರು.

# ಅಂಧಕಾರದಲ್ಲಿ ಮುದ್ದೇಬಿಹಾಳ ಬಸ್ ನಿಲ್ದಾಣ!



ಉದಯರಶ್ಮಿ ನ್ಯೂಸ್

ಮುದ್ದೇಬಿಹಾಳ: ಇಲ್ಲಿನ ಬಸ್ ನಿಲ್ದಾಣದಲ್ಲಿ ಸಂಜೆಯಾದರೆ ಸಾಕು ಕತ್ತಲೆ ಆವರಿಸಿ ಪ್ರಯಾಣಿಕರು ಭಯಪಡುವಂತಾಗಿದೆ. ಕಳೆದ ಕೆಲವು ತಿಂಗಳುಗಳಿದ ಈ ಸಮಸ್ಯೆ ಅನುಭವಿಸುತ್ತಿದ್ದು ಈ ಸಮಸ್ಯೆ ಬಗೆಹರಿಸಲು ಯಾರೊಬ್ಬರು ಮುಂದಾಗುತ್ತಿಲ್ಲ. ಈ ಕೂಡಲೇ ಬಂದ್ ಆದ ಲೈಟ್ ಗಳನ್ನು ದುರಸ್ತಿಗೊಳಿಸಬೇಕು ಎಂದು ಹೆಸರು ಹೇಳಲು ಇಚ್ಛಿಸದ ನಿಲ್ದಾಣದ ಮಳಿಗೆಯ ಬಾಡಿದಾರರೊಬ್ಬರು ವಿನಂತಿಸಿದ್ದಾರೆ.

ಈ ಕುರಿತು ’ಉದಯ ರಶ್ಮಿ’ ಯೊಂದಿಗೆ ಮಾತನಾಡಿದ ಅವರು, ಮುಖ್ಯ ಪ್ರವೇಶ ದ್ವಾರದ ಬಳಿಯೇ ಇಂಥಹ ಸಮಸ್ಯೆ ತಲೆದೋರಿದ್ದು ಸೂರ್ಯ ಮುಳುಗುತ್ತಿದ್ದಂತೆಯೇ ಪುಂಡ ಪೋಕರಿಗಳ ಹಾವಳಿ ಹೆಚ್ಚಾಗಿದೆ. ಪ್ರಯಾಣಿಕರು ಭಯ ಪಡುತ್ತಲೇ ತಿರುಗಾಡುವಂತಾಗಿದೆ. ಈ ಸಮಸ್ಯೆ ಬಗ್ಗೆ ಹಲವಾರು ಬಾರಿ ಸಂಬಂಧಿಸಿದವರಿಗೆ ತಿಳಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಕಾರಣ ಅನಿವಾರ್ಯವಾಗಿ ಮಾಧ್ಯಮದ ಮೂಲಕ ಸಂಬಂಧಿಸಿದ ಅಧಿಕಾರಿಗಳಿಗೆ ಮನವಿ ಮಾಡುತ್ತಿರುವದಾಗಿ ತಿಳಿಸಿದ್ದಾರೆ.



# ಕನ್ನಡ ನಮ್ಮ ಅನ್ನದ ಭಾಷೆ :ವಾಲಿಕಾರ




**ಉದಯರಶ್ಮಿ ನ್ಯೂಸ್**

ಕೊಲ್ಹಾರ: ನಾಡು –ನುಡಿ, ನೆಲ–ಜಲ, ಸಂಸ್ಕೃತಿ–ಪರಂಪರೆ ಪರಿಚಯಿಸುವ ಕಾರ್ಯವನ್ನು ತಾಯಿ ಭುವನೇಶ್ವರಿಯನ್ನು ಹೊತ್ತ ಕನ್ನಡದ ರಥವು ರಾಜ್ಯಾದ್ಯಂತ ಕನ್ನಡದ ಕಂಪು ಬೀರುತ್ತಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲೀಕಾರ ಹೇಳಿದರು.

ತಾಲೂಕಿನ ಮಸೂತಿ ಗ್ರಾಮದಲ್ಲಿ ಕನ್ನಡ ರಥವನ್ನು ಸಾವಿರಾರು ವಿದ್ಯಾರ್ಥಿಗಳು ಸಾರ್ವಜನಿಕರು. ಸಾಹಿತಿಗಳು ಶಿಕ್ಷಕರು ಅದ್ದೂರಿಯಾಗಿ ಸ್ವಾಗತಿಸಿಕೊಂಡು ಕಾರ್ಯಕ್ರಮ ಆಯೋಜಿಸಿದರು.

ಈ ಸಂದರ್ಭದಲ್ಲಿ ಮಾತನಾಡುತ್ತಾ, ಕನ್ನಡ ನಮ್ಮ ಅನ್ನದ ಭಾಷೆ, ಆಡಳಿತ ಭಾಷೆ, ಮಾತೃ ಭಾಷೆಯಾಗಿದ್ದರಿಂದ ಕನ್ನಡವನ್ನು ಬೆಳೆಸೋಣ ಎಂದರು.

ಕೊಲ್ಹಾರ ತಹಸೀಲ್ದಾರ ಎಸ್ ಎಸ ನಾಯಕಲಮಠ ಮಾತನಾಡಿ, ಮೈಸೂರು ರಾಜ್ಯ ಬದಲಾಯಿಸಿ ಕರ್ನಾಟಕವೆಂದು ಹೊಸ ಹೆಸರನ್ನು ನಾಮಕರಣ ಮಾಡಿ ಐವತ್ತು ವರ್ಷ ಗತಿಸಿದರಿಂದ ಕರ್ನಾಟಕ ಸುವರ್ಣ ಸಂಭ್ರಮ ನಿಮಿತ್ತ ನಾಡಿನಾದ್ಯಾಂತ ಭುವನೇಶ್ವರಿ ಹೊತ್ತ ಕನ್ನಡ ರಥ ಜಾಥಾ ಮಸೂತಿ ಗ್ರಾಮದಲ್ಲಿ ಅದ್ದೂ–ರಿಯಾಗಿ ಜರುಗಿದ್ದು ಅತ್ಯಂತ ಸಂತಸ ಉಂಟಾಗಿದೆ ಎಂದರು.

ಚುಟುಕು ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಜಗದೀಶ ಸಾಲಳ್ಳಿ ಮಾತನಾಡಿ, ಕನ್ನಡ ಸಾಹಿತ್ಯ ಇತರ ಸಾಹಿತ್ಯಗಳಿಗಿಂತ ಶ್ರೇಷ್ಠವಾಗಿದ್ದು, ಅತಿ ಹೆಚ್ಚಿನ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರನ್ನು ಹೊಂದಿ ನಾಡಿಗೆ ಗೌರವ ಬಂದಿದೆ ಎಂದರು.

ಕಸಾಪ ತಾಲೂಕ ಅಧ್ಯಕ್ಷ ಅಶೋಕ ಆಸಂಗಿ, ದಯಾನಂದ ಹಿರೇಮಠ. ಎಸ್ ಎಸ್ ಗೌರಿ, ಸಂತೋಷ ಗಣಾಚಾರಿ, ರಾಜೇಸಾಬ ಶಿವನಗುತ್ತಿ ಮಾತನಾಡಿದರು. ಬಸವರಾಜ ಪಾಟೀಲ, ಎಸ ಎಸ್ ಬರಗಿ, ವಾಯ್ ಕೆ ಹೂಗಾರ, ಸಿ ಪಿ ಪಾಟೀಲ, ಶಿವಪ್ಪಾ ಹಂಗರಗಿ, ಕೃಷ್ಣ ವಾರೇಸ್, ರಮೇಶ ಕಾಗಲ, ಮೋಹನಗೌಡ ಪಾಟೀಲ, ಸವಿತಾ ಮಾದರ, ಆಯ್ ಜಿ ಹೊಸಮನಿ, ಎಚ್ ಆರ್ ರಾಠೋಡ, ಶರಣಗೌಡ ಬಿರಾದಾರ, ಮುಂತಾದವರು ಉಪಸ್ಥಿತರಿದ್ದರು.

# ಗಾನಬನಕ್ಕೆ ಜಾತಿ ಮತ ಪಂಥಗಳ ಹಂಗಿಲ್ಲ :ಓಲೆಮಠ ಶ್ರೀ

**ಉದಯರಶ್ಮಿ ನ್ಯೂಸ್**

ವಿಜಯಪುರ: ಜನಮಾನಸದಲ್ಲಿ ಬೆಳೆದು ಬಂದ ಸಂಗೀತ ವಿಶ್ವಬಾಷಿಕವಾಗಿದೆ. ಭಾವದ ಅಂತರ್ಮುಖಿಯಾದ ಗಾಯನಕ್ಕೆ ಜಾತಿ ಮತ, ಪಂಥಗಳ ಹಂಗಿಲ್ಲ. ಅದು ಶುದ್ಧ ವಿಶ್ವತತ್ವ ಇಂತಹ ಸಂಗೀತಕ್ಕೆ ಚೌಕಟ್ಟನ್ನು ಗುರು ಪಂಪರೆಯನ್ನು ಹಾಕಿಕೊಟ್ಟವರು. ಹಾನಗಲ್ಲ ಶಿವಯೋಗಿಗಳು ಹಾಗೂ ಪಂಚಾಕ್ಷರ ಕವಿ ಗವಾಯಿಗಳು ಎಂದು ಜಮಖಂಡಿ ಓಲೆಮಠದ ಅಭಿನವ ಕುಮಾರ ಚನ್ನಬಸವ ಮಹಾಸ್ವಾಮಿಗಳು ಹೇಳಿದರು.

ನಗರದ ಗಾನಬನದಲ್ಲಿ ಕುಮಾರ ಶಿವಯೋಗಿಗಳ 94ನೇ ಪುಣ್ಯ ಸ್ಮರಣೋತ್ಸವ ಹಾಗೂ ಪಂಡಿತ ಪಂಚಾಕ್ಷರ ಗವಾಯಿಗಳ 132ನೇ ಜಯಂತ್ಯೋತ್ಸವ ಕಾರ್ಯಕ್ರಮದ ಧರ್ಮಸಭೆಯ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಗುರು ಕಾರುಣ್ಯ ಸತತ ಅಭ್ಯಾಸ ಹಾಗೂ ಶ್ರದ್ಧೆ ಇದ್ದರೆ ಸಂಗೀತ ಸಾಧನೆ ಆಗುತ್ತದೆ. ಲತಾ ಮಂಗೇಶ್ಕರ ಅವರಿಗೆ ಬಾಲ್ಯದಲ್ಲಿ ಪಂಚಾಕ್ಷರಿ ಗವಾಯಿಗಳು ಆಶೀರ್ವದಿಸಿದ್ದನ್ನು ಸ್ಮರಿಸಬಹುದು. ಅಂಧರ ಅನಾಥರ ಸೇವೆಗೈಯುತ್ತಿರುವ ಉಭಯ ಪ್ರತಿಷ್ಠಾನಗಳ ಕಾರ್ಯವನ್ನು




ಸರ್ಕಾರ ಗುರುತಿಸಲಿ ಎಂದರು.

ಶಿವಯೋಗ ಮಂದಿರದ ಧರ್ಮದರ್ಶಿ ಎಂ.ಬಿ.ಹಂಗರಗಿ ಮಾತನಾಡಿ, ಶಿವಯೋಗ ಮಂದಿರ ಶರಣ ಸಂಸ್ಕೃತಿ ಸಾಧಕರಿಗೆ ತವರು ಮನೆಯಾದಂತೆ ವಿಜಯಪುರದ ಗಾನಬನವು ಸಂಗೀತ ಸಾಧಕರ ಗರಡಿಮನೆಯಾಗಿದೆ. ಮಕ್ಕಳಲ್ಲೇ ದೇವರನ್ನು ಕಾಣುವ ಪಂಡಿತ ತೋಂಟದಾರ್ಯರು ಅನೇಕರಿಗೆ ಸಂಗೀತ ಧಾರೆಯೆರೆದು ಅವರ ಬದುಕಿಗೆ ದಾರಿದೀಪವಾಗಿದ್ದಾರೆ ಎಂದರು.

ಹುಬ್ಬಳ್ಳಿಯ ವಿರಕ್ತಮಠದ ಸಿದ್ಧಲಿಂಗೇಶ್ವರರು ಮಹಾಸ್ವಾಮಿಗಳು ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮುದ್ದಡಗಾದ ಸಂಗಮೇಶ್ವರ ಸಂಸ್ಥಾನ ಹಿರೇಮಠದ ಸದ್ಯೋಜಾತ ರೇಣುಕ ಶಿವಾಚಾರ್ಯರು, ಕವಿಗಳಾದ ಮುದಗೇರಿ ರಮೇಶ ಕುಮಾರ, ನಾಗಯ್ಯ ಜಿ. ಹಿರೇಮಠ, ಗಾನಯೋಗಿ ಪಂಚಾಕ್ಷರ ಪ್ರತಿಷ್ಠಾನದ ಗೌರವ ಅಧ್ಯಕ್ಷ ಬಸವರಾಜ ಕೆಂಗನಾಳ ವೇದಿಕೆ ಮೇಲಿದ್ದರು.

ಹಿರಿಯ ಸಂಗೀತಗಾರರಾದ ಶ್ರೀಶೈಲ ಚಿಕ್ಕಮಠ, ಗದುಗಿನ ಗಾಯಕ ವೆಂಕಟೇಶ ಆಲಕೋಡ ಶಾಸ್ತ್ರೀಯ ಸಂಗೀತ ಹಾಡಿದರು. ಗಾನಬನದ ವಿದ್ಯಾರ್ಥಿಗಳು ಗಾಯನದ ಮೂಲಕ ಎಲ್ಲರ ಗಮನ ಸೆಳೆದರು. ಪಂಡಿತ ತೋಂಟದಾರ್ಯ ಕವಿ ಗವಾಯಿಗಳ ಸಂಗೀತದೊಂದಿಗೆ ಸಮಾರಂಭ ಸಂಪನ್ನಗೊಂಡಿತು.

ಚಿದಾನಂದ ಜಡಿಮಠ ಸ್ವಾಗತಿಸಿದರು. ಕೈಲಾಸನಾಥ ಮದಭಾವಿ ನಿರೂಪಿಸಿದರು. ಪಿ.ಸಿ.ಅರಕೇರಿಮಠ ನಿರ್ವಹಿಸಿದರು. ಸುಭಾಸಚಂದ್ರ ಕನ್ನೂರ ವಂದಿಸಿದರು.

ಕಾರ್ಯಕ್ರಮದಲ್ಲಿ ವಿರೇಶ ಜಂಗಿನಮಠ, ಎನ್.ವೈ.ದೇವಣಗಾಂವಿ, ಪಿ.ಎಸ್. ತಳಕೇರಿ, ಮಲ್ಲಯ್ಯ ಹಿರೇಮಠ, ಆನಂದ ಮುಳಸಾವಳಗಿ, ಡಾ. ಪರೀಕ್ಷಿತ ಕೋಟಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

# ರಸಪ್ರಶ್ನೆ ಸ್ಪರ್ಧೆ: ಮುಳಸಾವಳಗಿ ವಿದ್ಯಾರ್ಥಿನಿಯರ ಗೆಲುವು

**ಉದಯರಶ್ಮಿ ನ್ಯೂಸ್**

ದೇವರಹಿಪ್ಪರಗಿ: ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮದ ಅಂಗವಾಗಿ ಏರ್ಪಡಿಸಿದ ಸ್ಪರ್ಧೆಗಳಲ್ಲಿ ಮುಳಸಾವಳಗಿ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿಯರು ವಿಜೇತರಾಗಿದ್ದಾರೆ.

ತಾಲ್ಲೂಕು ಮಟ್ಟದಲ್ಲಿ ಏರ್ಪಡಿಸಿದ ಸ್ಪರ್ಧೆಗಳಲ್ಲಿ ರಸಪ್ರಶ್ನೆಯಲ್ಲಿ ಸಾವಿತ್ರಿ ಸುರಗಿಹಳ್ಳಿ ಪ್ರಥಮ, ಚಿತ್ರಕಲೆಯಲ್ಲಿ ಮಲ್ಲಮ್ಮ ನಾಗರಳ್ಳಿ ಪ್ರಥಮ ಹಾಗೂ ಪ್ರಬಂಧದಲ್ಲಿ ಅಕ್ಷತಾ ಭೈರೋಡಗಿ ದ್ವಿತೀಯ ಸ್ಥಾನ ಪಡೆದಿದ್ದಾರೆ.




ವಿದ್ಯಾರ್ಥಿನಿಯರ ಸಾಧನೆಗೆ ಎಸ್‌ಡಿಎಂಸಿ ಅಧ್ಯಕ್ಷರು, ಸದಸ್ಯರು, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿ, ವಿದ್ಯಾರ್ಥಿನೀಯರು ಅಭಿನಂದಿಸಿದ್ದಾರೆ ಎಂದು ಮುಖ್ಯಗುರು ಐ.ಎಸ್.ನರೂಣಿ ತಿಳಿಸಿದ್ದಾರೆ.

# ಮುತ್ತಗಿ: ಕನ್ನಡ ಜ್ಯೋತಿ ರಥ ಯಾತ್ರೆಗೆ ಸ್ವಾಗತ



**ಉದಯರಶ್ಮಿ ನ್ಯೂಸ್**

ಬಸವನಬಾಗೇವಾಡಿ: ತಾಲೂಕಿನ ಮುತ್ತಗಿ ಗ್ರಾಮದಲ್ಲಿ ಕರ್ನಾಟಕ ಸಂಭ್ರಮ 50ರ ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ ಜ್ಯೋತಿ ರಥ ಯಾತ್ರೆಗೆ ಬುಧವಾರ ಸಂಜೆ ತಾಲೂಕಾಡಳಿತದಿಂದ ಅದ್ದೂರಿಯಾಗಿ ತಾಲೂಕಿಗೆ ತಹಸೀಲ್ದಾರ ವೈ.ಎಸ್.ಸೋಮನಕಟ್ಟಿ ಸ್ವಾಗತಿಸಿಕೊಂಡರು.

ಮುತ್ತಗಿ ಕ್ರಾಸ್‌ನಲ್ಲಿ ಜ್ಯೋತಿ ರಥ–'ಯಾತ್ರೆಗೆ ಸ್ವಾಗತಿಸಿಕೊಳ್ಳಲಾಯಿತು. ನಂತರ ಗ್ರಾಮದಲ್ಲಿ ಜರುಗಿದ ಮೆರವಣಿಗೆಯಲ್ಲಿ ಕುಂಭಮೇಳ, ಲೇಜಿಮ್, ಕೋಲಾಟ, ಕರಡಿ ಮಜಲು, ವಿವಿಧ ಮಕ್ಕಳ ಛದ್ಮವೇಷ ಗಮನ ಸೆಳೆದವು.

ತಹಸೀಲ್ದಾರ ವೈ. ಎಸ್.ಸೋಮನಕಟ್ಟಿ, ತಾಪಂ ಅಧಿಕಾರಿ ಡಾ.ಯುವರಾಜ ಹನಗಂಡಿ, ಬಿಇಓ ವಸಂತ ರಾಠೋಡ ಮಾತನಾಡಿದರು.

ಮೆರವಣಿಗೆಯಲ್ಲಿ ಬಸ್ ಡಿಪೋ ವ್ಯವಸ್ಥಾಪಕ ಪಿ.ಕೆ.ಜಾಧವ, ಜಿಪಂ ಅಭಿಯಂತರ ವಿಲಾಸ ರಾಠೋಡ, ತಾಲೂಕು ಕಸಾಪ ಅಧ್ಯಕ್ಷ ಎಸ್.ಐ.ಡೋಣೂರ, ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಶಿವಾನಂದ ಮಂಗಾನವರ, ತಾಲೂಕು ಕಸಾಪ ಗೌರವ ಕಾರ್ಯದರ್ಶಿ ಶಿವಾನಂದ ಮಡಿಕೇಶ್ವರ, ಎಸ್. ಎಸ್.ಚಿಮ್ಮಲಗಿ, ಎಂ.ಬಿ.ತೋಟದ, ಬಿ.ವಿ.ಚಕ್ರಮನಿ, ಎಂ.ಎ.ಅಂಗಡಗೇರಿ, ಬಿ.ಎಫ್.ಮೇಟಿ, ಬಿ.ಬಿ.ಚಿಂಚೋಳಿ, ವೈ.ಕೆ.ಪತ್ತಾರ, ಸಿದ್ರಾಮ ಬಿರಾದಾರ, ಪ್ರೇಮಕುಮಾರ ಮ್ಯಾಗೇರಿ, ನಜೀರ ದಡ್ಡಿ, ಮಹೇಶ ಪೂಜಾರಿ, ಎಂ.ವಿ.ಗಬ್ಬೂರ,ಗ್ರಾಮ ಪಂಚಾಯಿತಿ ಅಧ್ಯಕ್ಷೆ ನೀಲಾ ಪಾಟೀಲ, ಉಪಾಧ್ಯಕ್ಷೆ ಕವಿತಾ ಬಡಿಗೇರ, ಸದಸ್ಯರು, ಗ್ರಾಮದ ವಿವಿಧ ಶಾಲೆಯ ಸಿಬ್ಬಂದಿ ಸೇ–ರಿದಂತೆ ಇತರರು ಭಾಗವಹಿಸಿದ್ದರು. ನಂತರ ಟಕ್ಕಳಕಿ ಗ್ರಾಮದಲ್ಲಿ ಕನ್ನಡ ಜ್ಯೋತಿ ರಥಯಾತ್ರೆ ಸಂಚರಿಸಿ ಬಸವನಬಾಗೇವಾಡಿ ಪಟ್ಟಣಕ್ಕೆ ಆಗಮಿಸಿ ವಾಸ್ತವ್ಯ ಮಾಡಿತು.

# ನಗರ ಕಲಿಕಾ ಪ್ರಾಯೋಗಿಕ ತರಬೇತಿ ಕಾರ್ಯಕ್ರಮ

**ಉದಯರಶ್ಮಿ ನ್ಯೂಸ್**

ಸಿಂದಗಿ: ಪುರಸಭೆ ವ್ಯಾಪ್ತಿಯಲ್ಲಿ ಬರುವ ಪದವಿ/ಸ್ನಾತಕೋತ್ತರ/ಡಿಪ್ಲೋಮಾ ಮುಗಿಸಿದ ವಿದ್ಯಾರ್ಥಿಗಳಿಗೆ ಡೆ–ನಲ್ಮ್ ಅಭಿಯಾನ ಮತ್ತು ಪಿ.ಎಮ್ ಸ್ವನಿಧಿ ಯೋಜನೆ ಅಡಿ ನಗರ ಕಲಿಕಾ ಪ್ರಾಯೋಗಿಕ ತರಬೇತಿ ಕಾರ್ಯಕ್ರಮವನ್ನು 2023–24 ನೇ ಸಾಲಿಗೆ ಅನುಷ್ಠಾನಗೊಳಿಸಲು ಸಿಂದಗಿ ಪುರಸಭೆಗೆ 04 ಗುರಿ ನಿಗದಿಪಡಿಸಿದ್ದು, ಡೇ– ನಲ್ಕ್ ಅಭಿಯಾನದ ಉಪಘಟಕಗಳು ಮತ್ತು ಪಿ.ಎಮ್ ಸ್ವನಿಧಿ ಯೋಜನೆ ಅಡಿ ಬೀದಿ ವ್ಯಾಪಾರಿಗಳ ಕುರಿತು ಅಧ್ಯಯನ ಮಾಡಿ ಜ್ಞಾನ ಮತ್ತು ಕೌಶಲ್ಯ ವೃದ್ಧಿಸಿಕೊಳ್ಳಲು ಅವಕಾಶವನ್ನು ಕಲ್ಪಿಸಿಕೊಡುವುದು ಈ ತರಬೇತಿಯ ಪ್ರಮುಖ ಉದ್ದೇಶವಾಗಿದೆ. ಕಾರಣ ಪದವಿ/ಸ್ನಾತಕೋತ್ತರ/ಡಿಪ್ಲೋಮಾ ಮುಗಿಸಿದ ಆಸಕ್ತಿಯುಳ್ಳ ಅಭ್ಯರ್ಥಿಗಳು ತಮ್ಮ ಶೈಕ್ಷಣಿಕ ದಾಖಲಾತಿಗಳೊಂದಿಗೆ ಫೆ.15ರಂದು ಸಾಯಂಕಾಲ 05:00 ಘಂಟೆಯೊಳಗಾಗಿ ಇಂಟರ್ನ್ಶಿಪ್ ತರಬೇತಿಗಾಗಿ ಅರ್ಜಿಯನ್ನು ಸಿಂದಗಿ ಪುರಸಭೆಯ ಡೇ–ನಲ್ಮ್ ಶಾಖೆಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಡೇ–ನಲ್ಮ್ ಶಾಖೆಯನ್ನು ಸಂಪರ್ಕಿಸಲು ಕೋರಲಾಗಿದೆ ಎಂದು ಪುರಸಭೆ ಮುಖ್ಯಧಿಕಾರ ಗುರುರಾಜ ಚೌಕಿಮಠ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಚಿಮ್ಮಡದಲ್ಲಿ ಕಸ ಸಂಗ್ರಹ, ವಿಲೇವಾರಿ ವಾಹನಕ್ಕೆ ಮಹಿಳೆಯೇ ಸಾರಥಿ

# ಸ್ಟೇರಿಂಗ್ ಹಿಡಿದ ಸ್ಟ್ರಾಂಗ್ ಮಹಿಳೆ ಸರೋಜಾ

**ಉದಯರಶ್ಮಿ ನ್ಯೂಸ್**

– ಇಲಾಹಿ ಇ. ಜಮಖಂಡಿ

ಚಿಮ್ಮಡ: ಗ್ರಾಮ ಪಂಚಾಯತಿಯ ಕಸದ ವಾಹನಕ್ಕೆ ಚಾಲಕಿಯಾಗಿ ಗ್ರಾಮದ ಮಹಿಳೆ ಸರೋಜಾ ಮ್ಯಾದಾರ ಸುಮಾರು ಏಳು ತಿಂಗಳಿಂದ ಗ್ರಾಮದಲ್ಲಿ ಸ್ವಚ್ಚ ವಾಹಿನಿ ಚಾಲಕಿಂ–ಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಚಿಮ್ಮಡ ಗ್ರಾಮದಲ್ಲಿ ವಾರದಲ್ಲಿ ಎರಡು ದಿನ ಶನಿವಾರ ಮತ್ತು ಬುಧವಾರ ಸ್ವಚ್ಚ ವಾಹಿನಿ ಜೊತೆ ಪ್ರತಿ ಮನೆ ಮನೆಗೆ ಕಸ ಸಂಗ್ರಹಣೆ ಮಾಡುವ ಮೂಲಕ ಸ್ವಚ್ಚ ಭಾರತಕ್ಕೆ ಕೈ ಜೋಡಿಸುತ್ತಿದ್ದಾರೆ.




ಜಿಲ್ಲಾ ಪಂಚಾಯತಿ ಮಹತ್ವದ ಹೆಜ್ಜೆ: ಮಹಿಳೆಯ ಆರ್ಥಿಕ ಭದ್ರತೆ. ಸ್ವಾವಲಂಬಿ ಬದುಕು. ಸಬಲೀಕರಣ–ಕ್ಕಾಗಿ ವಾಹನ ಚಾಲನೆ ತರಬೇತಿ ನೀಡುವ ಮೂಲಕ ಸರ್ಕಾರ ಮತ್ತೊಂದು ಮಹತ್ವದ ಹೆಜ್ಜೆ ಇಟ್ಟಿದೆ. ಗ್ರಾಮಿಣ ಭಾಗದ ಹಲವು ಮಹಿಳೆಯ–



ರಿಗೆ ಚಾಲನಾ ತರಬೇತಿ ನೀಡಿ ಬದುಕು ಕಟ್ಟಿಕೊಳ್ಳಲು ಬೆನ್ನೆಲುಬಾಗಿ ನಿಂತಿದೆ.

ಗ್ರಾಮದ ಸ್ವಚ್ಚ ವಾಹಿನಿಗಳಲ್ಲಿ ಕಸ ಸಂಗ್ರಹಣೆಯ ತರಬೇತಿ ಪಡೆದ ಮಹಿಳಾ ವಾಹನ ಚಾಲಕಿಯರನ್ನು ನೇಮಕ ಮಾಡುವ ಮೂಲಕ ದಿಟ್ಟ ಹೆಜ್ಜೆ ಇಟ್ಟಿದೆ.

ಮನೆ ಬಾಗಿಲಗಳಿಗೆ ವಾಹನ: ಸ್ವಚ್ಚ ಭಾರತ್ ಮಿಷನ್ ಯೋಜನೆಯಡಿ ರಾಜ್ಯದಲ್ಲಿ ಪ್ರತಿ ಗ್ರಾಮ ಪಂಚಾಯತಿಗೆ ಒಂದು ಹಲವು ಗ್ರಾ.ಪಂ.ಗಳಿಗೆ ಎರಡು ವಾಹನ ಒದಗಿಸಿದ್ದು, ಈ ವಾಹನದೊಟ್ಟಿಗೆ ಪ್ರತಿ ಮನೆ ಬಾಗಿಲಿಗೆ ಬರುವ ಸಿಬ್ಬಂದಿ ಹಸಿ ಮತ್ತು ಒಣ ಕಸ ಸಂಗ್ರಹಿಸಲಿದ್ದಾರೆ.

ರಬಕವಿ–ಬನಹಟ್ಟಿ ತಾಲೂಕಿನಲ್ಲಿ 17 ಜನ ಮಹಿಳೆಯರು ವಾಹನ ಚಾಲನಾ ತರಬೇತಿ ಪಡೆಯುವ ಮೂಲಕ ಮಹಿಳಾ ಶಕ್ತಿಕರಣಕ್ಕೆ ನಾಂದಿ ಹಾಡಿದ್ದು ಇದರ ಭಾಗವಾಗಿ ಸ್ವಚ್ಚ ವಾಹನಕ್ಕೆ ಮಹಿಳೆಯರೆ ಸಾರಥಿಯಾಗಿದ್ದಾರೆ.

ಕಳೆದ ಎರಡು ವರ್ಷಗಳ ಹಿಂದೆಯೇ ಗ್ರಾಮದ ಪ್ರತೀ ಮನೆಗಳಿಗೆ ಒಣ ಮತ್ತು ಹಸಿ ಕಸ ಸಂಗ್ರಹಕ್ಕೆ ಪ್ಲಾಸ್ಟಿಕ್ ಬಕೇಟಗಳನ್ನು ಒದಗಿಸಲಾಗಿದೆ. ಗ್ರಾ.ಪಂ.ನಿಂದ ಆಯ್ಕೆಯಾದ ಮಹಿಳೆಯರನ್ನು ತರಬೇತಿ ಕಳುಹಿಸಿಕೊಡಲಾಗುತ್ತದೆ. ತರಬೇತಿ ಪಡೆದು ಏಳು ತಿಂಗಳಿಂದ ಚಿಮ್ಮಡ ಗ್ರಾಮದಲ್ಲಿ ಸರೋಜಾ ಮ್ಯಾದಾರ ಅವರು ಉತ್ತಮವಾಗಿ ಕಾರ್ಯನಿರ್ವಸುತ್ತಿದ್ದಾರೆ. ವಾಹನ ಚಾಲನಾ ಪ್ರಮಾಣ ಪತ್ರ ಪಡೆದ ಮಹಿಳೆಯರಿಗೆ ಚಾಲಕಿಯಾಗಿ ಕಾರ್ಯನಿರ್ವಹಿಸಲು ಗ್ರಾ.ಪಂ. ಆಡಳಿತ ಮಂಡಳಿ ಗ್ರಾಪಂ. ಅಭಿವೃದ್ಧಿ ಅಧಿಕಾರಿ ಶಿವಾನಂದ ಬಿರಾದಾರ ಹಾಗೂ ಗ್ರಾಮಸ್ಥರು ಸರೋಜಾ ಮ್ಯಾದಾರ ಅವರಿಗೆ ಎಲ್ಲ ರೀತಿಯ ಸಹಕಾರ ನೀಡಿದ್ದಾರೆ. ಒಟ್ಟಾರೆ ಕಠಿಣ ಕೆಲಸಕ್ಕೂ ಸೈ ಎಂದ ಸರೋಜಾ ಮ್ಯಾದಾರ ಇತರ ಮಹಿಳೆಯರಿಗೆ ಮಾದರಿಯಾಗಿದ್ದಾರೆ.

> **" ಸ್ವ–ಸಹಾಯ ಗುಂಪುಗಳ ಸದಸ್ಯರಿಗೆ ವಾಹನ ಚಾಲನಾ ತರಬೇತಿ ನೀಡುವ ಯೋಜನೆ ಜಿ.ಪಂ ನಿಂದ ಆಯೋಜಿಸಲಾಗಿತ್ತು. ಬೀದಿ ವ್ಯಾಪಾರ ಮಾಡುತಿದ್ದ ನಾನು ತರಬೇತಿ ಪಡೆದು ಈಗ ಸಂತೋಷದಿಂದ ವಾಹನ ಚಲಾಯಿಸುತಿದ್ದೇನೆ, ಇದರಿಂದ ನನಗೆ ಹಾಗೂ ನಮ್ಮ ಕುಟುಂಬಕ್ಕೆ ಒಳ್ಳೆಯದಾಗಿದೆ."**
>
> **– ಸರೋಜಾ ಮ್ಯಾದಾರ, ಕಸ ವಿಲೇವಾರಿ ವಾಹನ ಚಾಲಕಿ**

> **"ತಾಲೂಕಿನಲ್ಲಿ 17ಜನ ಮಹಿಳೆಯರು ಚಾಲನಾ ತರಬೇತಿ ಪಡೆದು ಈಗ ಕಾರ್ಯ ನಿರ್ವಹಿಸುತಿದ್ದಾರೆ ಹಾಗೂ 58 ಜನ ಮಹಿಳೆಯರು ಸ್ವಚ್ಚದಾಹಿಗಳಾಗಲು ತರಬೇತಿ ಪಡೆದಿದ್ದು ಹಂತ ಹಂತವಾಗಿ ಪ್ರತಿ ತರಬೇತಿ–ದಾರರಿಗೆ ಪೂರ್ಣ ಪ್ರಮಾಣದಲ್ಲಿ ಈ ಸೇವೆಗೆ ನಿಯುಕ್ತಿಗೊಳಿಸಲಾಗುವುದು."**
>
> **– ಸಿದ್ದಪ್ಪಾ ಪಟ್ಟಿಹಾಳ, ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ**

# ಅಮಾನತ್ ಅಲ್ಪಸಂಖ್ಯಾತರ ಪತ್ತಿನ ಬ್ಯಾಂಕ್ ಗೆ ಅವಿರೋಧ ಆಯ್ಕೆ

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ಪಟ್ಟಣದ ಅಮಾನತ್ ಅಲ್ಪಸಂಖ್ಯಾತರ ಪತ್ತಿನ ಸೌಹಾರ್ದ ಸಹಕಾರಿ ಬ್ಯಾಂಕ್ ನ ನೂತನ ಅಧ್ಯಕ್ಷರಾಗಿ ಮಲಿಕಸಾಬ ನದಾಫ, ಉಪಾಧ್ಯಕ್ಷರಾಗಿ ಇಸಾಕ ನಿರ್ದೇಶಕರುಗಳಾಗಿ ಎಂ ಬಿ ಜಕ್ಕೆರಾಳ, ಬಿ ಎಂ ಮುಲ್ಕಿಸಿಪಾಯಿ, ಎಂ.ಎ. ಲಿಂಗಸೂರ (ವಕೀಲರು), ಎ.ಎಂ. ಮೊಮೀನ, ಎಲ್.ಡಿ.ಢವಳಗಿ, ಎಂ.ಎ.ವಠಾಗಿ, ಎಂ.ಎಚ್. ಜಾನ್ವೇಕರ, ಎ.ಎಂ.ಢವಳಗಿ, ಎಲ್.ಆರ್.ನಾಯ್ಕೋಡಿ, ಅರ್.ಎ. ನಾಯ್ಕೋಡಿ, ಎಸ್.ಎ. ಢವಳಗಿ ಅವಿರೋಧವಾಗಿ ಆಯ್ಕೆಯಾದರು. ಇದೇ ವೇಳೆ ನೂತನ ಅಧ್ಯಕ್ಷ ಉಪಾಧ್ಯಕ್ಷರನ್ನು ಸನ್ಮಾನಿಸಿ



ಗೌರವಿಸಲಾಯಿತು.

ಈ ವೇಳೆ ವ್ಯವಸ್ಥಾಪಕರು ಹಾಗೂ ಸಿಬ್ಬಂದಿ ವರ್ಗದವರು ಭಾಗಿಯಾಗಿದ್ದರು.

# ಸಂವಿಧಾನದ ಅರಿವು ಮೂಡಿಸುವ ಕಾರ್ಯಕ್ರಮಗಳಾಗಲಿ :ಪಾಟೀಲ

ಉದಯರಶ್ಮಿ ನ್ಯೂಸ್



ಸಿಂದಗಿ: ರಾಜ್ಯ ಸರಕಾರ ಹೊರಡಿಸಿದ ಸಂವಿಧಾನ ಜಾಗೃತಿ ರಥ–'ವನ್ನು ಎಲ್ಲ ಗ್ರಾಮ ಪಂಚಾಯತಿಗಳಲ್ಲಿ ಸಾರ್ವಜನಿಕರು ಅದ್ದೂರಿಯಾಗಿ ಸ್ವಾಗತಿಸಿಕೊಂಡು ಸಂವಿಧಾನದ ಅರಿವು ಮೂಡಿಸುವಂತ ಕಾರ್ಯಕ್ರಮಗಳು ಅನಾವರಣಗೊಳ್ಳಬೇಕು ಎಂದು ವಿಜಯಪುರ ಆಹಾರ ವಿಬಾಗದ ಜಿಲ್ಲಾಧಿಕಾರಿ ವಿನಯ ಪಾಟೀಲ ಹೇಳಿದರು.

ಪಟ್ಟಣದ ತಹಶೀಲ್ದಾರ ಕಾರ್ಯಾಲಯದ ಆವರಣದಲ್ಲಿ ಹಮ್ಮಿಕೊಂಡ ಸಂವಿಧಾನ ಜಾಗೃತಿ ಜಾಥಾದ ಪೂರ್ವಬಾವಿ ಸಭೆಯ ಅದ್ಯಕ್ಷತೆ ವಹಿಸಿ ಮಾತನಾಡಿ, ಸಂವಿಧಾನದ ಮೂಲಭೂತ ಹಕ್ಕುಗಳ ಬಗ್ಗೆ ತಿಳೀದುಕೊಂಡು ಮತ್ತೊಬ್ಬರಿಗೆ ಅರಿವು ಮೂಡಿಸುವದು ಮತ್ತು ಸರಕಾರದಿಂದ ಹಮ್ಮಿಕೊಂಡ 5 ಗ್ಯಾರೆಂಟಿಗಳ ಬಗ್ಗೆ ಮಾಹಿತಿ ನೀಡುವುದು ಈ ಕಾರ್ಯಕ್ರಮದ ಮೂಲ ಉದ್ದೇಶವಾಗಿದ್ದು ಈ ತಾಲೂಕಿನಲ್ಲಿ 16 ಗ್ರಾಂ ಪ ಹಾಗೂ 1 ಪುರಸಭೆಯಲ್ಲಿ 4 ದಿನಗಳ ಕಾಲ ಈ ರಥ ಸಂಚರಿಸುತ್ತದೆ ಕಾರಣ ಯಾವುದೇ ಜಾತಿಗೆ ಸಿಮೀತವಾಗದೇ ಎಲ್ಲರು ಸ್ವ ಇಚ್ಚೇಯಿಂದ ಡಾ. ಅಂಬೇಡ್ಕರರು ಬರೆದ ಸಂವಿಧಾನದ ಮೂಲ ಪಿಠೀಕೆಯನ್ನು ತಿಳಿದುಕೊಳ್ಳಬೇಕು ಎಂದು ಕರೆ ನೀಡಿದರು.

ತಹಶೀಲ್ದಾರ ಪ್ರದೀಪಕುಮಾರ ಹಿರೇಮಠ ಮಾತನಾಡಿ, ಫೇ 11 ರಂದು ಯರಗಲ್ ಬಿ.ಕೆ ಗ್ರಾಮಕ್ಕೆ ಸಂವಿಧಾನ ರಥ ಆಗಮಿಸಲಿದ್ದು ನಂತರ ನಾಗಾವಿ ಬಿ.ಕೆ, ಸುಂಗಠಾಣ, ಯಂಕಂಚಿಗೆ ವಾಸ್ತವ್ಯವಾಗಲಿದೆ. 12 ರಂದು ಗೋಲಗೇರಿ, ಹೊನ್ನಳ್ಳಿ, ಹಂದಿಗನೂರ, ಗುಬ್ಬೇವಾಡ ಗ್ರಾಮ ಪಂಚಾಯತಗಳ ಸಂಚರಿಸಿ ಬ್ಯಾಕೋಡ ಗ್ರಾಪಂಯಲ್ಲಿ ವಾಸ್ತವ್ಯವಾಗಲಿದೆ. 13 ರಂದು ರಾಂಪೂರ ಪಿಎ, ಚಾಂದಕವಠೆ, ಚಟ್ಟರಕಿ ಯಿಂದ ಹಿಕ್ಕನಗುತ್ತಿಯಲ್ಲಿ ವಾಸ್ತವ್ಯ, 14 ರಂದು ಬಂದಾಳ, ಕನ್ನೊಳ್ಳಿ, ಕೊಕಟನೂರ ನಂತರ ಸಿಂದಗಿಯಲ್ಲಿ ವೇದಿಕೆ ಕಾರ್ಯಕ್ರಮ ಹಮ್ಮಿಕೊಂಡು ಬೇರೆ ತಾಲೂಕಿಗೆ ಬಿಳ್ಕೊಡಲಾಗುವುದು ಎಲ್ಲ ಗ್ರಾಮ ಪಂಚಾಯತಿಗಳಿಗೆ ನೋಡಲ್ ಅಧಿಕಾ–ರಿಗಳನ್ನು ನೇಮಕ ಮಾಡಲಾಗಿದೆ ಅಲ್ಲದೆ ವಾಸ್ತವವಾದ ಗ್ರಾಂಪಯಲ್ಲಿ ವೇದಿಕೆ ಕಾರ್ಯಕ್ರಮ ಹಮ್ಮಿಕೊಂಡು ಸಂವಿಧಾನದ ಮೂಲ ಪೀಠಿಕೆಯ ಸಾರಾಂಶದ ಬಗ್ಗೆ ತಿಳುವಳಿಕೆ ನೀಡುವುದಲ್ಲದೆ ಅನುಭವಿಗಳಿಂದ ಉಪನ್ಯಾಸವಿದ್ದು ಇದು ಸಾರ್ವಜನಿಕ ಕಾರ್ಯಕ್ರಮವಾಗಬೇಕು ಎಂದು ಎಲ್ಲ ನೋಡಲ್ ಅಧಿಕಾ–ರಿಗಳಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕಸಾಪ ಮಾಜಿ ಅದ್ಯಕ್ಷ ರಾಜಶೇಖರ ಕೂಚಬಾಳ, ದಸಂಸ ಜಿಲ್ಲಾ ಸಂ.ಸಂಚಾಲಕ ವೈ.ಸಿ.ಮಯೂರ, ರಾಜಶೇಖರ ಚೌರ ವಕೀಲರು, ಅಶೋಕ ಸುಲ್ಪಿ ಸಲಹೆ–ಸೂಚನೆ ನೀಡಿದರು.

ದಸಂಸ ಜಿಲ್ಲಾ ಸಂಚಾಲಕ ಚಂದ್ರಕಾಂತ ಸಿಂಗೆ, ಪರಸುರಾಮ ಕಾಂಬಳೆ, ರಣಧೀರ ಪಡೆ ರಾಜ್ಯ ಸಂಚಾಲಕ ಸಂತೋಷ ಮಣೀಗೆರಿ ಸೇರಿದಂತೆ ಕಹಲವು ಸಂಘಟನೆಗಳು ಸಹಮತ ಸೂಚಿಸಿದರು.

ಲಿಂಬೆ ಅಂಬಿವೃದ್ಧಿ ಮಂಡಳಿ ಮಾಜಿ ಅದ್ಯಕ್ಷ ಅಶೋಕ ಅಲ್ಲಾಪೂರ ಮಾತನಾಡಿ, ರಾಜ್ಯದಲ್ಲಿ ನಡೆಯುತ್ತಿರುವ ಜಯಂತಿಗಳು ಆಯಾ ಜಾತಿಗಳಿಗೆ ಸಿಮಿತವಾಗಿದ್ದು ವಿಷದನೀಯ ಸಂಗತಿ ಎಂದರು.

ತಾಪಂ ನೋಡಲ್ ಅಧಿಕಾರಿ ನಿತ್ಯಾನಂದ ಯಲಗೋಡ ಇದ್ದರು.

ಶಿರಸ್ತೆದಾರ ಜಿ.ಎಸ್.ರೋಡಗಿ ಸ್ವಾಗತಿಸಿ, ವಂದಿಸಿದರು.

# ಕೇಂದ್ರ ಜಲ ಶಕ್ತಿ ತಂಡ: ಇಂಡಿ ತಾಲೂಕಿನ ವಿವಿಧೆಡೆ ಕ್ಷೇತ್ರ ಭೇಟಿ



ಉದಯರಶ್ಮಿ ನ್ಯೂಸ್

ವಿಜಯಪುರ: ಗಣಿ ಸಚಿವಾಲಯದ ನಿರ್ದೇಶಕರು ಹಾಗೂ ಕೇಂದ್ರ ಜಲ ಶಕ್ತಿ ತಂಡದ ಕೇಂದ್ರ ನೋಡಲ್ ಅಧಿಕಾರಿಗಳಾದ ವಿವೇಕ ಕುಮಾರ ಶರ್ಮಾ ಮತ್ತು ವಿಜ್ಞಾನಿಗಳು(ಬಿ), ಜಲವಿಜ್ಞಾನ, ಕೇಂದ್ರ ಅಂತರ್ಜಲ ಮಂಡಳಿ ಆಯುಶ್ ಕೇಶರ್ವಾಣಿ ಅವರು ಫೆ.7ರಂದು ಜಿಲ್ಲೆಯ ಇಂಡಿ ತಾಲೂಕಿನ ನಿಂಬಾಳ ಕೆ.ಡಿ, ಕೊಳುರಗಿ, ಬಬಲಾದ, ಹೊರ್ತಿ ಹಾಗೂ ಚವಡಿಹಾಳ ಗ್ರಾಮ ಪಂಚಾಯಿತಿಗಳಿಗೆ ಭೇಟಿ ನೀಡಿದರು.

ನಿಂಬಾಳ ಕೆ.ಡಿ ಗ್ರಾಮ ಪಂಚಾಯತಿಗೆ ಭೇಟಿ ನೀಡಿ, ಬೋರ್‌ವೆಲ್ ಮರುಪೂರಣ ಘಟಕ ಕೊಳುರಗಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಸಾವಳಸಂಗ ಗ್ರಾಮದ ಸಾಮಾಜಿಕ ಅರಣ್ಯ ಇಲಾಖೆಯಡಿ ನಿರ್ಮಿಸಿರುವ ನೆಡುತೋಪು ಕಾಮಗಾರಿಯನ್ನು ವೀಕ್ಷಣೆ ಮಾಡಿ ಗಿಡಗಳಿಗೆ ನೀರು ಪೂರೈಸುವ ವ್ಯವಸ್ಥೆ ಕುರಿತು ಸ್ಥಳದಲ್ಲಿದ್ದ ಅಧಿಕಾ–ರಿಗಳೊಂದಿಗೆ ಚರ್ಚಿಸಿ ಮಾಹಿತಿ ಪಡೆದುಕೊಂಡರು.

ಬಬಲಾದ ಗ್ರಾಮ ಪಂಚಾಯಿತಿ ಕಟ್ಟಡದ ಮಳೆ ನೀರು ಕೊಯ್ಲು ಘಟಕ ಹಾಗೂ ಶುದ್ಧ ಕುಡಿಯುವ ನೀರಿನ ಘಟಕ ಚವಡಿಹಾಳ ಗ್ರಾಮಕ್ಕೆ ಭೇಟಿ ನೀಡಿ ಜಲ ಜೀವನ್ ಮಿಷನ್ ಯೋಜನೆಯಡಿ ಪ್ರಗತಿ ಹಂತದಲ್ಲಿರುವ ಪ್ರತಿ ಮನೆ–ಮನೆಗೆ ಕಾರ್ಯಾತ್ಮಕ ನಳ ಸಂಪರ್ಕ ಕಾಮಗಾರಿ ವೀಕ್ಷಿಸಿದರು. ಪ್ರಗತಿಯಲ್ಲಿರುವ ಕಾಮಗಾ–ರಿಗಳನ್ನು ಎರಡು ತಿಂಗಳಲ್ಲಿ ಪೂರ್ಣಗೊಳಿಸಿಬೇಕೆಂದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ಗ್ರಾಮಸ್ಥರಿಗೆ ಕುಡಿಯುವ ನೀರು ಪೂರೈಸುತ್ತಿರುವುದರ ಬಗ್ಗೆ ಅಧಿಕಾ–ರಿಗಳೊಂದಿಗೆ ಚರ್ಚಿಸಿದರು. ಬರಗಾಲ ಇರುವುದರಿಂದ ಮುಂಬರುವ ಬೇಸಿಗೆಯಲ್ಲಿ ಜನರಿಗೆ ಕುಡಿಯುವ ನೀರಿನ ಯಾವುದೇ ಸಮಸ್ಯೆಯಾಗದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಸೂಚನೆ ನೀಡಿದರು. ಹೊರ್ತಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯಡಿ ಅನುಷ್ಠಾನಗೊಂಡ ಅಬ್ಸರ್ವೇಶನ್ ಬೋರವೆಲ್‌ನ ನೀರಿನ ಅಂತರ್ಜಲ ಮಟ್ಟ ಪರೀಕ್ಷಿಸಿದರು. ಹೊರ್ತಿ ಗ್ರಾಮದ ರೈತರ ಜಮೀನಿನಲ್ಲಿ ದ್ರಾಕ್ಷಿ ಬೆಳೆ ಹಾಗೂ ಬೋರ್‌ವೆಲ್ ಕಾಮಗಾರಿ ಹಾಗೂ ಕೃಷಿ ಇಲಾಖೆಯಡಿ ನಿರ್ಮಿಸಲಾದ ಕಂದಕ ಬದು (ಟ್ರೆಂಚ್ ಕಂ ಬಂಡ್) ಕಾಮಗಾರಿ ತಂಡ ವೀಕ್ಷಣೆ ನಡೆಸಿತು.

ಈ ಸಂದರ್ಭದಲ್ಲಿ ಕೃಷಿ ಇಲಾಖೆಯ ಉಪ ನಿರ್ದೇಶಕರಾದ ಪವಾರ, ಇಂಡಿ ತಾಲೂಕಿನ ಕಾರ್ಯನಿರ್ವಾಹಕ ಅಧಿಕಾ–ರಿಗಳಾದ ಬಾಬು ರಾಠೋಡ, ಜಿಲ್ಲಾ ಪಂಚಾಯತಿಯ ಸಹಾಯಕ ಯೋಜನಾಧಿಕಾರಿ ಅರುಣಕುಮಾರ ದಳವಾಯಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರಾದ ಬಸವರಾಜ ಕುಂಬಾರ, ವಲಯ ಅರಣ್ಯ ಅಧಿಕಾರಿಗಳಾದ ಮಂಜುನಾಥ, ಇಂಡಿ ತಾಲೂಕಿನ ಸಹಾಯಕ ನಿರ್ದೇಶಕ ಸಂಜಯ ಖಡಗೇಕರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾದ ಎಸ್.ಆರ್ ರುದ್ರವಾಡಿ, ತೋಟಗಾ–ರಿಕೆ ಇಲಾಖೆಯ ಸಹಾಯಕ ನಿರ್ದೇಶಕರಾದ ಹೆಚ್.ಎಸ್ ಪಾಟೀಲ, ಕೊಳುರಗಿ ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಸಿದ್ದು ಲೋಣಿ, ಬಬಲಾದ ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಬಿರಾದಾರ, ಚವಡಿಹಾಳ ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಸಿ. ಜಿ ಪಾರೆ, ತಾಂತ್ರಿಕ ಸಂಂ–ಯೋಜಕರಾದ ಸಾಹಿಲ ಬನಸೋಡೆ, ತಾಲೂಕು ಪಂಚಾಯತಿ ಸಿಬ್ಬಂದಿ ಉಪಸ್ಥಿತರಿದ್ದರು.

# ಶಾಲಾ ಚಟುವಟಿಕೆಗಳಲ್ಲಿ ಪೋಷಕರ ಭಾಗವಹಿಸುವಿಕೆ ಮುಖ್ಯ

ಉದಯರಶ್ಮಿ ನ್ಯೂಸ್




ಬಸವನಬಾಗೇವಾಡಿ: ಮಕ್ಕಳ ಮೇಲೆ ನಮ್ಮ ಕನಸುಗಳನ್ನು ಹೇರದೇ ಅವರ ಕನಸುಗಳನ್ನು ಸಾಕಾರಗೊಳಿಸಿಕೊಳ್ಳಲು ಪಾಲಕರು, ಶಿಕ್ಷಕರು ಅವಕಾಶ ನೀಡಬೇಕೆಂದು ತಳೇವಾಡ ಸರ್ಕಾರಿ ಪ್ರೌಢಶಾಲೆಯ ಮುಖ್ಯಶಿಕ್ಷಕ ಸಂಗಮೇಶ ಪೂಜಾರಿ ಹೇಳಿದರು.

ಪಟ್ಟಣದ ಇಂಗಳೇಶ್ವರ ರಸ್ತೆಯಲ್ಲಿರುವ ವಿಶ್ವಗುರು ಶಿಕ್ಷಣ ಸಂಸ್ಥೆಯ ಬಸವ ಆಂಗ್ಲ ಮಾಧ್ಯಮ ಶಾಲೆಯ ಪ್ರಥ–'ಮ ವಾರ್ಷಿಕೋತ್ಸವದಂಗವಾಗಿ ಮಂಗಳವಾರ ಸಂಜೆ ಹಮ್ಮಿಕೊಂಡಿದ್ದ ಬಸವ ರಂಗೋತ್ಸವ ಕಾರ್ಯಕ್ರಮದಲ್ಲಿ ಮುಖ್ಯಅತಿಥಿ ಸ್ಥಾನ ವಹಿಸಿ ಮಾತನಾಡಿದ ಅವರು, ಮಕ್ಕಳು ವ್ಯವಸ್ಥೆಗೆ ಹೊಂದಿಕೊಳ್ಳುವ ಗುಣ ಕಲಿಸದೇ ವ್ಯವಸ್ಥೆಯನ್ನು ಪ್ರಶ್ನೆ ಮಾಡುವಂತಹ ಶಿಕ್ಷಣ ಕಲಿಸಬೇಕು. ಮಕ್ಕಳಿಗೆ ಸಮಾಜದಲ್ಲಿ ಬದುಕು ಸಾಗಿಸಲು ಬೇಕಾದ ಕೌಶಲ್ಯಗಳನ್ನು ಕಲಿಸಬೇಕು. ಮಕ್ಕಳ ಮನೋವಿಜ್ಞಾನ ಅರಿತು ಅವರಿಗೆ ಅದರಂತೆ ಶಿಕ್ಷಣ ಕೊಡಿಸಬೇಕೆಂದರು.

ಮಕ್ಕಳಿಗೆ ಉತ್ತಮ ಶಾಲೆ, ಉತ್ತಮ ಪರಿಸರ ಅಗತ್ಯವಿದೆ. ಇದು ಮಕ್ಕಳ ಕಲಿಕೆಗೆ ಪೂರಕವಾಗಲಿದೆ. 1972 ರ ಅವಧಿಯಲ್ಲಿ ಜನಿಸಿದವರು ಜೀವನದಲ್ಲಿ ಆಸಕ್ತಿ, ಪ್ರೀತಿಗೆ 30 ವರ್ಷ ಕಾಲ, 1972–92 ರ ಅವಧಿಯಲ್ಲಿ ಜನಿಸಿದವರು 7 ವರ್ಷ ಕಾಲ, 1992–2012 ಅವಧಿಯಲ್ಲಿ ಜನಿಸಿದವರು 1 ತಿಂಗಳ ಕಾಲ, 2012 ಈಚೆಗೆ ಜನಿಸಿದವರಿಗೆ ಜೀವನದಲ್ಲಿ ವ್ಯಾಮೋಹ, ಪ್ರೀತಿ, ಆಲೋಚನೆ ಪ್ರತಿ ಕ್ಷಣದಲ್ಲಿ ಬದಲಾವಣೆಯಾಗುತ್ತದೆ ಎಂದು ಅಧ್ಯಯನವೊಂದು ಸಮೀಕ್ಷೆ ಮಾಡಿದೆ. ಇಂತಹ ಸನ್ನಿವೇಶದಲ್ಲಿ ನಾವು ಮಕ್ಕಳನ್ನು ಕೇವಲ ಶಾಲೆಗೆ ಕಳುಹಿಸದೇ ಅವರ ಎಲ್ಲ ಶಾಲಾ ಚಟುವಟಿಕೆಗಳಲ್ಲಿ ಪೋಷಕರು ಭಾಗವಹಿಸುವದು ಮುಖ್ಯವಾಗಿದೆ. ಈ ಶಿಕ್ಷಣ ಸಂಸ್ಥೆಯು ಮಕ್ಕಳಿಗೆ ಪೂರಕವಾದ ಶಿಕ್ಷಣ ಕಲಿಸುವ ಜೊತೆಗೆ ಸಂಸ್ಥೆಯು ಎತ್ತರಕ್ಕೆ ಬೆಳೆಯುವಂತಾಗಲಿ ಎಂದು ಆಶಯ ವ್ಯಕ್ತಪಡಿಸಿದರು.

ನಿವೃತ್ತ ಶಿಕ್ಷಕ ಎಫ್.ಡಿ.ಮೇಟಿ ಮಾತನಾಡಿದರು. ಸಾನಿಧ್ಯವನ್ನು ಶೇಖರಯ್ಯ ಹಿರೇಮಠ ವಹಿಸಿದ್ದರು. ವಿಶ್ವಗುರು ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಕೆ.ವೈ.ಬೀರಲದಿನ್ನಿ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಶಿಕ್ಷಣ ಸಂಯೋಜಕಿ ಎ.ಎಸ್.ಗುಬ್ಬಾ, ಸಿಆರ್‌ಪಿ ಬಿ.ಎಸ್.ಚನ್ನಗೊಂಡ, ನಿವೃತ್ತ ಉಪಪ್ರಾಂಶುಪಾಲ ಎಸ್.ಎಸ್.ಝುಳಕಿ, ನಿವೃತ್ತ ಉಪನ್ಯಾಸಕ ಎಚ್.ಎಸ್.ಬಿರಾದಾರ, ನಿವೃತ್ತ ಮುಖ್ಯೋಪಾಧ್ಯಾಯ ಎಸ್.ಎಂ.ಸಿಂದಗಿ, ರಾಘವೇಂದ್ರ ಚಿಕ್ಕೊಂಡ, ಸಂಗಯ್ಯ ಹಿರೇಮಠ, ಪಿ.ಎಸ್.ಮಸಬಿನಾಳ ಇತರರು ಇದ್ದರು. ಸೀತರಾಮ ಲಮಾಣಿ ಸ್ವಾಗತಿಸಿದರು. ಶಿಕ್ಷಕಿ ನದಾಫ, ಸಾಗರ ಪವಾರ ನಿರೂಪಿಸಿದರು. ಜ್ಯೋತಿ ಕೊಟ್ಲಿ ವಂದಿಸಿದರು.

# ನಗರ ಕಲಿಕಾ ಪ್ರಯೋಗಿಕ ತರಬೇತಿಗೆ ಅರ್ಜಿ ಆಹ್ವಾನ

ಉದಯರಶ್ಮಿ ನ್ಯೂಸ್

ವಿಜಯಪುರ: 2023–24ನೇ ಸಾಲಿನಲ್ಲಿ ಕೊಲ್ಹಾರ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಡೇ–ನಲ್ಮ್ ಅಭಿಯಾನ ಮತ್ತು ಪಿಎಂ ಸ್ವನಿಧಿ ಯೋಜನೆ ಅಡಿಯಲ್ಲಿ ನಗರ ಕಲಿಕಾ ಪ್ರಾಯೋಗಿಕ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ.

ಈ ಯೋಜನೆಯ ಮೂಲಕ ಬೀದಿ ವ್ಯಾಪಾರಿಗಳ ಕುರಿತು ಅಧ್ಯಯನ ಮಾಡಿ ಜ್ಞಾನ ಮತ್ತು ಕೌಶಲ್ಯ ವೃದ್ಧಿಸಿಕೊಳ್ಳಲು ಅವಕಾಶವನ್ನು ಕಲ್ಪಿಸಿಕೊಡಲಾಗುತ್ತದೆ. ಈ ತರಬೇತಿ ಕಾರ್ಯಕ್ರಮಕ್ಕೆ ಪದವಿ, ಸ್ನಾತಕೋತ್ತರ, ಡೀಪ್ಲೋಮ ಪಾಸಾದ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಆಸಕ್ತ ಅಭ್ಯರ್ಥಿಗಳು ತಮ್ಮ ಶೈಕ್ಷಣಿಕ ದಾಖಲೆಗಳೊಂದಿಗೆ 21–02–2024ರ ಸಂಜೆ 5 ಗಂಟೆಯೊಳಗೆ ಕೊಲ್ಹಾರ ಪಟ್ಟಣ ಪಂಚಾಯತ್ ಡೇ–ನಲ್ಮ್ ಶಾಖೆಗೆ ಸಲಿಸಬಹುದಾಗಿದೆ ಎಂದು ಕೊಲ್ಹಾರ ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವ್ಯಕ್ತಿತ್ವ ವಿಕಸನ ಮಾಲೆ..

# ಪರೀಕ್ಷೆಯ ಹಬ್ಬ ಸಂಭ್ರಮಿಸಿ

ಉದಯರಶ್ಮಿ ದಿನಪತ್ರಿಕೆ



ಜಯ್ ನುಡಿ

● ಜಯಶ್ರೀ.ಜೆ.ಅಬ್ಬಿಗೇರಿ
ಇಂಗ್ಲೀಷ್ ಉಪನ್ಯಾಸಕರು, ಬೆಳಗಾವಿ
9449234142

ಇನ್ನೇನು ಕೆಲ ದಿನಗಳಲ್ಲಿ ಸಾಲು ಸಾಲು ಪರೀಕ್ಷೆಗಳು ಬರಲಿವೆ. ಅಂದರೆ ಒಂದು ತರಹ ಪರೀಕ್ಷೆಯ ಸುಗ್ಗಿ, ಪರೀಕ್ಷೆ ಹಬ್ಬ ಅನ್ನಿ. ಇದೇನ್ರಿ ನೀವು ಪರೀಕ್ಷೆಯನ್ನು ಹಬ್ಬಕ್ಕೆ ಹೋಲಿಸುತ್ತಿದ್ದೀರಿ ಅನ್ನುವ ಪ್ರಶ್ನೆ ನಿಮ್ಮದು ಅಂತ ನನಗೆ ಖಂಡಿತ ಗೊತ್ತು. ಕಿರಿಕಿರಿ ಎನಿಸುವ ಪರೀಕ್ಷೆಯನ್ನು ಅದ್ಹೇಗೆ ಸಂಭ್ರಮಿಸುವುದು ಅಂತೀರೇನು? ಪರೀಕ್ಷೆಯೆಂಬುದು ನೀವು ಊಹಿಸಿರದ ಯಾವುದೋ ಮೂಲೆಯಿಂದ ಬಂದಿರುವಂತಹದು ಅಲ್ಲ. ಒಮ್ಮೆಲೇ ಬಂದು ಬೀಳುವಂತಹದಲ್ಲ. ಆಕಸ್ಮಿಕವಾದುದು ಅಲ್ಲ. ಮಳೆಯ ಹಾಗೆ ಯಾವಾಗ ಬರುತ್ತದೆಯೋ ಏನೋ ಅನ್ನುವಂತಹದು ಅಲ್ಲ. ಬಂದರೆ ಬಂತು ಹೋದರೆ ಹೋಯ್ತು ಎನ್ನುವ ಅನಿಶ್ಚತೆಯನ್ನೂ ಹೊಂದಿಲ್ಲ.

ಯಾವಾಗ ಗೊತ್ತಾಗುತ್ತದೆ?

ತರಗತಿಗಳಿಗೆ ಪ್ರವೇಶಾತಿ ಪಡೆಯುವಾಗಲೇ ಗೊತ್ತಿರುತ್ತದೆ ಮುಂದೊಂದು ದಿನ ವಾರ್ಷಿಕ ಪರೀಕ್ಷೆಯನ್ನು ಎದುರಿಸಲಿದ್ದೇನೆ ಎಂದು ಹೀಗಿದ್ದಾಗಲೂ ಪರೀಕ್ಷಾ ಭಯ ಏಕೆ? ಎನ್ನುವ ಪ್ರಶ್ನೆ ಮೂಡುವುದು ಸಹಜ. ಏಕೆಂದರೆ ಅಂದು ಕಲಿಸಿದ್ದನ್ನು ಅಂದಂದೇ ಓದಿ ಅರ್ಥೈಸಿಕೊಳ್ಳುವುದಿಲ್ಲ. ಮೇಲಾಗಿ ಪರೀಕ್ಷೆಯನ್ನು ಎದುರಿಸಲು ಸರಿಯಾದ ಸಿದ್ಧತೆ ಮೊದಲಿನಿಂದಲೂ ಮುಂದೂಡುತ್ತಲೇ ಬರಲಾಗುತ್ತದೆ.

ಭಯ ಬಿಟ್ಟವರಿಗೆ ಜಯ

ಮೊದಲಿನಿಂದ ತಯಾರಿ ಮಾಡುತ್ತ ಬಂದವರಿಗೆ ಪರೀಕ್ಷಾ ಭಯ ಕಾಡುವುದಿಲ್ಲ. ಭಯ ಬಿಟ್ಟವರಿಗೆ ಜಯ ಎಂಬಂತೆ, ಸಿದ್ಧತೆ ಮಾಡಿಕೊಂಡವರು ಟಾಪರ್ ಆಗಿ ಹೊರಹೊಮ್ಮುತ್ತಾರೆ. ರ್‍ಯಾಂಕ್ ಪಡೆಯುತ್ತಾರೆ. ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದವರಿಗೆ ಜೀವನದಲ್ಲಿ ಉತ್ತಮ ಸ್ಥಾನವು ಸಹ ಲಭಿಸುವ ಅವಕಾಶಗಳು ಅಧಿಕ.

ಓದಿದರೆ ಸಾಲದು

ಪರೀಕೆಗೆ ಕೇವಲ ಓದಿದರೆ ಸಾಲದು ಅದರಾಚೆಗೂ ಕೆಲ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಹಾಗಿದ್ದರೆ ಇನ್ನೇನು ಕೆಲವೇ ದಿನಗಳಲ್ಲಿ ಬರಲಿರುವ ಪರೀಕ್ಷೆಗಳನ್ನು ಭಯವಿಲ್ಲದೇ ಬರೆಯುವುದಾದರೂ ಹೇಗೆ? ಎನ್ನುವ ಕಾಡುವ ಪ್ರಶ್ನೆಗೆ ಇಲ್ಲಿವೆ ಕೆಲವು ಸಲಹೆಗಳು. ಜತೆಗೆ ಬೇಕು ಬೇಡಗಳ ಪಟ್ಟಿಯೂ ಇಲ್ಲಿದೆ.

ಓದುವ ಕೊಠಡಿ

ಓದುವ ಕೊಠಡಿಯಲ್ಲಿ ಸಾಕಷ್ಟು ಗಾಳಿ ಬೆಳಕು ಇರಲಿ. ನೀವೇ ತಯಾ–ರಿಸಿದ ನಿಮ್ಮ ಓದಿನ ವೇಳಾಪಟ್ಟಿ ಜತೆಗಿರಲಿ. ಪರೀಕ್ಷಾ ವೇಳಾಪಟ್ಟಿಯನ್ನು ಗೋಡೆಗೆ ಅಂಟಿಸಿಕೊಳ್ಳಿ. ಅಧ್ಯಯನದ ಸಾಮಗ್ರಿಗಳನ್ನು ಚೆಲ್ಲಾಪಿಲ್ಲಿಯಾಗಿಸದೇ ಕೈಗೆ ಸಿಗುವಂತೆ ಒಪ್ಪವಾಗಿ ಜೋಡಿಸಿಟ್ಟುಕೊಳ್ಳಿ. ಕೊಠಡಿಯಲ್ಲಿ ಬೇಡದ ವಸ್ತುಗಳು ಬೇಡ. ಬೇಡದ ವಿಷಯಗಳು ಬೇಡ. ಮೊಬೈಲ್ ಬಳಕೆಯಂತೂ ಬೇಡವೇ ಬೇಡ. ಸೂತ್ರಗಳು, ಪ್ರಮೇಯಗಳು ನಕ್ಷೆಗಳನ್ನು ಗೋಡೆಗೆ ಹಾಕಿ ಪ್ರತಿದಿನ ಕಣ್ಣಾಡಿಸಿ ಮನನ ಮಾಡಿಕೊಳ್ಳಿ. ಮನೆಯಲ್ಲಿ ಓದುವ ಕೊಠಡಿಯ ಸೌಲಭ್ಯವಿಲ್ಲದಿದ್ದರೆ ಶಾಂತವಿರುವ ಜಾಗವನ್ನು ಆಯ್ದುಕೊಳ್ಳಿ. ದಿನನಿತ್ಯ ಓದು ಅಲ್ಲಿಯೇ ಸಾಗಲಿ.



ಒತ್ತಾಯಕ್ಕೆ ಓದದಿರಿ

ಪಾಲಕರ ಪೋಷಕರ ಒತ್ತಾಯಕ್ಕೆ ಇಲ್ಲವೇ ಒತ್ತಡ ಹಾಕುತ್ತಿದ್ದಾರೆಂದು ಓದದಿರಿ. ನಿರಂತರ ಅಧ್ಯಯನ ನಿಮಗಾಗಿ ಮಾಡಿ. ಮಹಾತ್ಮ ಗಾಂಧೀ–ಜಿಯವರು ಹೇಳಿದಂತೆ ನಿಮ್ಮ ಬಾಳ ಶಿಲ್ಪಿಗಳು ನೀವೇ. ನಿಮಗಾಗಿ ಓದಿ. ಕೊನೆಯ ಕೆಲವೇ ಕೆಲವು ದಿನಗಳಲ್ಲಿ ಓದನ್ನು ಹೇಗೆ ಮುಗಿಸುವುದು ಅಂತ ಗಾಬರಿಯಾಗಬೇಡಿ. ಪರೀಕ್ಷಾ ವೇಳಾಪಟ್ಟಿಯನ್ನು ನೋಡಿ, ಅದಕ್ಕೊಂದು ಯೋಜನೆ ಹಾಕಿಕೊಂಡು ಓದಿ. ನಿಮಗಾಗಿ ಓದುವಾಗ ಅಲ್ಲಿ ಭಯದ ಪ್ರಶ್ನೆಯೇ ಇಲ್ಲ. ಏನಿದ್ದರೂ ವಿಶ್ವಾಸವೇ. ಆತ್ಮವಿಶ್ವಾಸವೊಂದಿದ್ದರೆ ಸಾಕು ಅದು ನಿಮ್ಮನ್ನು ಗೆಲ್ಲಿಸುತ್ತದೆ.

ಮಾದರಿ ತಿಳಿದುಕೊಳ್ಳಿ

ಪ್ರಶ್ನೆ ಪತ್ರಿಕೆಯ ಮಾದ–ರಿಯನ್ನು ತಿಳಿದುಕೊಳ್ಳಿ. ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಬಿಡಿಸಿ ತೆಗೆಯಿರಿ. ಒಂದೆಡೆ ಮೂರು ಗಂಟೆಗಳವರೆಗೆ ಕುಳಿತು ಪ್ರ್ಯಾಕ್ಟಿಸ್‌ಗಾಗಿ ಉತ್ತರ ಪತ್ರಿಕೆಯನ್ನು ಬಿಡಿಸಿ. ಪರೀಕ್ಷೆಯಲ್ಲಿ ಸಮಯ ಪಾಲನೆ ಮುಖ್ಯ. ಯಾವ ಪ್ರಶ್ನೆಗೆ ಎಷ್ಟು ಸಮಯ ನೀಡಬೇಕು ಎನ್ನುವುದು ತಿಳಿಯುತ್ತದೆ. ನೀವು ಬರೆದ ಉತ್ತರ ಪತ್ರಿಕೆಯನ್ನು ಶಿಕ್ಷಕರಿಗೆ ಮಾರ್ಗದರ್ಶಕರಿಗೆ ತೋರಿಸಿ. ಉತ್ತರ ಬರೆಯುವ ವಿಧಾನ ತಿಳಿದುಕೊಳ್ಳಿ. ಮಾಡಿದ ತಪ್ಪುಗಳನ್ನು ಸರಿಪಡಿಸಿಕೊಳ್ಳಿ.

ಬಾಯಿಪಾಠ ಬೇಡ

ಉತ್ತರಗಳನ್ನು ಬಾಯಿಪಾಠ ಮಾಡುವ ವಿಧಾನವನ್ನು ಕೈಬಿಡಿ. ಬದಲಾಗಿ ಪಠ್ಯವನ್ನು ಚೆನ್ನಾಗಿ ಓದಿ ನೆನಪಿಟ್ಟುಕೊಳ್ಳುವುದನ್ನು ರೂಢಿಸಿಕೊಳ್ಳಿ. ಎಂಟ್ಹತ್ತು ಸಲ ಓದಿ ಓದಿ ಬಾಯಿಪಾಠ ಮಾಡುವುದಕ್ಕಿಂತ ಒಂದೆರಡು ಸಲ ಬರೆದು ತೆಗೆಯುವುದು ಒಳ್ಳೆಯದು. ಬರೆದು ತೆಗೆಯುವ ಈ ವಿಧಾನದಿಂದ ಯಾವುದೇ ಪ್ರಶ್ನೆ ಕೇಳಿದರೂ ನೀವು ಉತ್ತರಿಸಲು ಸಮರ್ಥರಾಗಿರುತ್ತೀರಿ. ನಮ್ಮ ನಿಜವಾದ ಸಂಪತ್ತು ತಲೆ ಸಂಪತ್ತು ಎಂಬುದನ್ನು ಮರೆಯದಿರಿ.


ಆರಂಭಶೂರತನ ಬೇಡ

ಪರೀಕ್ಷೆ ಸಮೀಪಿಸುತ್ತಿದೆ ಎಂದು ನಡುವೆ ವಿಶ್ರಾಂತಿಯಿಲ್ಲದೇ ಸತತ ಐದಾರು ಗಂಟೆ ಓದುವುದು ಶುದ್ಧ ತಪ್ಪು. ಒಂದು ದಿನ ಬಹಳಷ್ಟು ಓದಿ ಆರಂಭಶೂರರಾಗಿ ಮರುದಿನ ಮಲಗಿಬಿಡುತ್ತೀರಿ. ಈ ರೀತಿಯ ಓದು ಗೋರ್ಕಲ್ಲಿನ ಮೇಲೆ ನೀರು ಸುರಿದಂತೆ ವ್ಯರ್ಥವಾಗುವುದು. ಎಲ್ಲಿದ್ದೆ ಸಂಗಯ್ಯ ಅಂದರೆ ಅಲ್ಲೇ ಇದ್ದೆ ಅನ್ನುವಂತೆ ಆಗುತ್ತದೆ. ಅಷ್ಟೇ ಅಲ್ಲ ಮನಸ್ಸಿನ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರುವುದು. ಒಂದು ಗಂಟೆ ಓದಿದ ನಂತರ ಐದ್ಹತ್ತು ನಿಮಿಷಗಳ ಬ್ರೇಕ್ ಇರಲಿ. ಅಂದಾಗ ನಿಮ್ಮ ಚಿತ್ತ ಓದಿನತ್ತ ಕೇಂದ್ರೀಕೃತವಾಗುತ್ತದೆ. ಆರಂಭಶೂರತನ ಬಿಟ್ಟು ಅಂತಿಮ ವೀರರಾಗುವುದನ್ನು ಕಲಿತುಕೊಳ್ಳಿ. ಉದಾಸೀನತೆಯನ್ನು ತೊಡೆದು ನಿರಂತರತೆಯನ್ನು ಅಭ್ಯಾಸ ಮಾಡಿಕೊಳ್ಳಬೇಕು. ನಿರಂತರ ಶ್ರಮವಹಿಸಿದರೆ ಮಾತ್ರ ಗೆಲುವು ಒಲಿಯುವುದು.



ಯೋಗ ಧ್ಯಾನ ಬೇಕು

ಪರೀಕ್ಷೆಗಳು ಸಮೀಪಿಸುತ್ತಿವೆ ಎನ್ನುವ ಕಾರಣಕ್ಕೆ ಸಮಯವನ್ನು ಕೇವಲ ಓದಿಗೆಂದೇ ಮೀಸಲಿಟ್ಟು ಆಟೋಟಗಳಿಗೆ ದೈಹಿಕ ಕಸರತ್ತುಗಳಿಗೆ ನಿಷೇಧ ಬೇಡ. ಮಾನಸಿಕ ಒತ್ತಡದ ನಿವಾರಣೆಗಾಗಿ ವ್ಯಾಯಾಮ ಮುಖ್ಯ. ಯಾವಾಗಲೂ ಒಂದು ವಿಷಯದ ಕೇಂದ್ರಕ್ಕೆ ಲಗ್ಗೆ ಇಡಬೇಕೆಂದರೆ ಪ್ರಾಣಾಯಾಮ ಧ್ಯಾನ ರೂಢಿಸಿಕೊಳ್ಳಬೇಕು. ಪುಸ್ತಕವನ್ನು ಖರೀದಿಸಿ ನಮ್ಮದಾಗಿಸಿಕೊಳ್ಳಬಹುದು. ಆದರೆ ಅದರಲ್ಲಿಯ ಜ್ಞಾನ ನಮ್ಮದಾಗಿಸಿಕೊಳ್ಳಲು ಅದರತ್ತ ಚಿತ್ತ ಹರಿಸಲೇಬೇಕು. ಮನೋನಿಯಂತ್ರಣಕ್ಕೆ ಧ್ಯಾನದ ಅಗತ್ಯವಿದೆ. ಪರೀಕ್ಷೆಗಳು ಸನಿಹದಲ್ಲಿರುವಾಗ ದೈಹಿಕ ಆರೋಗ್ಯ ಕಾಪಿಟ್ಟುಕೊಳ್ಳಲು ಪ್ರತಿದಿನ ಸಮಯ ಮೀಸಲಿಟ್ಟು ಯೋಗ,ಧ್ಯಾನ,ನಡಿಗೆ ವ್ಯಾಯಾಮ ಮಾಡಲೇಬೇಕು ಮರೆಯುವಂತಿಲ್ಲ. ಏಕಾಗ್ರತೆಯಿಂದ ಓದಿನಲ್ಲಿ ಮನಸ್ಸನ್ನು ಮಗ್ನಗೊಳಿಸಲು ಇವು ಸಹಕಾರಿ.




ಆಹಾರ ಹೀಗಿರಲಿ

ಕರಿದ ಪದಾರ್ಥಗಳನ್ನು ಬಿಡಿ. ಹೊರಗಿನ ಕುರುಕಲು ತಿಂಡಿ ಬಿಡಿ. ಮನೆಯಲ್ಲಿ ತಯಾರಿಸಿದ ಸಾತ್ವಿಕ ಮತ್ತು ಪೌಷ್ಟಿಕ ಆಹಾರ ಸೇವನೆ ಮಾಡಿ. ನೀರನ್ನು ಹೆಚ್ಚಾಗಿ ಕುಡಿಯಿರಿ. ಮೊಸರು ಮಜ್ಜಿಗೆಯೂ ಇರಲಿ.

ಕೊನೆ ಹನಿ

ನೀವು ಯಾವ ವಿಷಯದ ಬಗ್ಗೆ ಸತತವಾಗಿ ಯೋಚಿಸುತ್ತೀರೋ ಅದೇ ನೀವಾಗುತ್ತ ಹೋಗುತ್ತೀರಿ. ಸತತ ಅಭ್ಯಾಸದಿಂದ ಮಾತ್ರವೇ ಜ್ಞಾನ ಸಿದ್ಧಿಸುತ್ತದೆ. ದಿನಂಪ್ರತಿ ಐದಾರು ಗಂಟೆಯಷ್ಟು ಓದಿಗಾಗಿ ಎತ್ತಿಡಿ. ನಿರಂತರವಾಗಿ ಅಭ್ಯಾಸ ಮಾಡಿ ಇಲ್ಲದಿದ್ದರೆ ಪರೀಕ್ಷೆ ನಿಮ್ಮ ಹಿಡಿತಕ್ಕೆ ಸಿಗುವುದಿಲ್ಲ. ಬೆಂಬತ್ತಿದ ಭಯವೂ ಬೆನ್ನು ಬಿಡುವುದಿಲ್ಲ. ಇವೆಲ್ಲವನ್ನೂ ತಪ್ಪದೇ ಪಾಲಿಸಿದಾಗ ಪರೀಕ್ಷೆಯೆಂಬ ಹಬ್ಬವನ್ನು ಸಂಭ್ರಮಿಸಬಹುದು ಅಲ್ಲವೇ?..




# ಗೃಹಜ್ಯೋತಿ ಯೋಜನೆ: ಶೇ.91 ನೋಂದಣಿ

**ಉದಯರಶ್ಮಿ ನ್ಯೂಸ್**

ವಿಜಯಪುರ: ಜಿಲ್ಲೆಯಲ್ಲಿ 4,63,958 ಗೃಹ ಬಳಕೆ ಸ್ಥಾವರಗಳಿದ್ದು, ಅದರಲ್ಲಿ ಜನವರಿ 2024ರ ಅಂತ್ಯಕ್ಕೆ 4,21,240 ಗ್ರಾಹಕರು ಗೃಹಜ್ಯೋತಿ ಯೋಜನೆಯಡಿ ನೋಂದಣಿ ಮಾಡಿಕೊಂಡಿದ್ದಾರೆ. ಇದರಲ್ಲಿ 4,08,981 ಗ್ರಾಹಕರು ಗೃಹಜ್ಯೋತಿಯಡಿ ಉಚಿತ ವಿದ್ಯುತ್ ಸೌಲಭ್ಯ ಪಡೆದಿದ್ದಾರೆ. ಈ ಮೂಲಕ ಇಲಾಖೆಗೆ 17.67ಕೋಟಿ ರೂ ಅನುದಾನ ಲಭ್ಯವಾಗಿದೆ.

ಗೃಹಜ್ಯೋತಿ ಯೋಜನೆಗೆ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ದಿನಾಂಕ:05–08–2023ರಂದು ಚಾಲನೆ ನೀಡಿದ್ದರು. ಈ ಯೋಜನೆಯಡಿ ಅರ್ಹ ಫಲಾನುಭವಿಗಳಿಗೆ ಗರಿಷ್ಠ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ಸೌಲಭ್ಯ ನೀಡಲಾಗುತ್ತದೆ.

ಗೃಹಜ್ಯೋತಿ ನೋಂದಣಿಗಾಗಿ ಸಾರ್ವಜನಿಕರು ಕರ್ನಾಟಕ ಒನ್ ಕೇಂದ್ರ, ಗ್ರಾಮ ಒನ್ ಕೇಂದ್ರ, ಸೇವಾ ಸಿಂಧು ಪೋರ್ಟಲ್, ಹೆಸ್ಕಾಂ ಉಪ ವಿಭಾಗದ ಕಚೇರಿಯ ಸೌಜನ್ಯ ಕೌಂಟ–ರ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಈ ಯೋಜನೆಯಡಿ ನೋಂದಾಯಿಸಲು ಆಧಾರ್ ಕಾರ್ಡ್, ವಿದ್ಯುತ್ ಬಿಲ್, ಆಧಾರ್ ಲಿಂಕ್ ಇರುವ ಮೊಬೈಲ್ ಸಂಖ್ಯೆ ಅವಶ್ಯಕತೆ ಇದೆ ಎಂದು ವಿಜಯಪುರ ಹೆಸ್ಕಾಂನ ಅಧೀಕ್ಷಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಾಜಿ ಸೈನಿಕರಿಂದ ಕ್ಲರ್ಕ್ ಹುದ್ದೆಗೆ ಅರ್ಜಿ ಆಹ್ವಾನ

**ಉದಯರಶ್ಮಿ ನ್ಯೂಸ್**

ವಿಜಯಪುರ: ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯಲ್ಲಿ ಕಚೇರಿಯ ಸಾಮಾನ್ಯ ಪತ್ರ ವ್ಯವಹಾರ, ಲೆಕ್ಕ ಪತ್ರ, ಪತ್ರ ವ್ಯವಹಾರ ಕಾರ್ಯ ನಿರ್ವಹಣೆಗಾಗಿ ಅರ್ಹರಿಂದ ತಾತ್ಕಾಲಿಕವಾಗಿ ಮಾಜಿ ಸೈನಿಕ–ರಿಂದ ತಾತ್ಕಾಲಿಕವಾಗಿ ಕ್ಲರ್ಕ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕಂಪ್ಯೂಟ–ರ್,ಲೆಕ್ಕಪತ್ರ ಜ್ಞಾನ,ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಪತ್ರ ವ್ಯವಹಾರ ಮಾಡುವ ಅನುಭವ ಇರಬೇಕು. 50 ವರ್ಷದೊಳಗಿನ ಅಭ್ಯರ್ಥಿಗಳು ತಮ್ಮ ಬಯೋಡೇಟಾ ಹಾಗೂ ಅಗತ್ಯ ಪ್ರಮಾಣ ಪತ್ರಗಳೊಂದಿಗೆ ಉಪ ನಿರ್ದೇಶಕರ ಕಾರ್ಯಲಯ, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಡಿ.ಸಿ ಕಾಂಪೌಂಡ್ ಹತ್ತಿರ ವಿಜಯಪುರ ಇವರಿಗೆ ಅರ್ಜಿಯನ್ನು ಸಲ್ಲಿಸುವಂತೆ ಪ್ರಕಟಣೆಯಲ್ಲಿ ಉಪ ನಿರ್ದೇಶಕರು ಸೈನಿಕ ಕಲ್ಯಾಣ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗುತ್ತಿಗೆ ಆಧಾರದ ವೈದ್ಯಾಧಿಕಾರಿ ಹುದ್ದೆಗೆ ನೇರ ಸಂದರ್ಶನ

**ಉದಯರಶ್ಮಿ ನ್ಯೂಸ್**

ವಿಜಯಪುರ: ತಾಲೂಕಾ ಆಸ್ಪತ್ರೆ ಮುದ್ದೇಬಿಹಾಳದ ಎಆರ್‌ಟಿ ಕೇಂದ್ರದಲ್ಲಿ ಖಾಲಿ ಇರುವ ಒಂದು ವೈದ್ಯಾಧಿಕಾರಿ ಹುದ್ದೆಗೆ ಸಂಪೂರ್ಣ ಮೆರಿಟ್ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ದಿನಾಂಕ:15–02–2024ರ ಬೆಳಿಗ್ಗೆ 10 ಗಂಟೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ ಮುದ್ದೇಬಿಹಾಳ ತಾಲೂಕಾ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿಯನ್ನು ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ತ್ಯಾಗವೀರ ಶಿರಸಂಗಿ ಲಿಂಗರಾಜ ಅರಸರು

**ಉದಯರಶ್ಮಿ ದಿನಪತ್ರಿಕೆ**

**ವೀಣಾಂತರಂಗ**



–ವೀಣಾ ಎಚ್. ಪಾಟೀಲ್, ಮುಂಡರಗಿ

ಇಂದು ಇಡೀ ಉತ್ತರ ಕರ್ನಾಟಕವು ಶೈಕ್ಷಣಿಕವಾಗಿ ಮುಂದುವರೆಯಲು ಕಾರಣವಾಗಿರುವ ಎರಡು ಶಕ್ತಿ ಕೇಂದ್ರಗಳಲ್ಲಿ ಲಿಂಗಾಯತ ಮಠಗಳು ಮುಂಚೂಣಿಯಲ್ಲಿದ್ದರೆ ಎರಡನೇ ಶಕ್ತಿ ಕೇಂದ್ರವಾಗಿ ಶಿರಸಂಗಿಯ ಲಿಂಗರಾಜ ಅರಸರು ನಿಲ್ಲುತ್ತಾರೆ ಎಂದರೆ ಅತಿಶಯೋಕ್ತಿ ಏನಲ್ಲ. ಉತ್ತರ ಕರ್ನಾಟಕದ ಕೆಎ□□□ ಸೊಸೈಟಿ ಎಂದು ಕರೆಯಲ್ಪಡುವ ಕರ್ನಾಟಕ ಲಿಂಗಾಯತ ಎಜುಕೇಶನ್ ಸೊಸೈಟಿ ಮತ್ತು ಬಿ ಎಲ್ ಡಿ ಇ ಸಂಸ್ಥೆಗಳ ಹುಟ್ಟು ಮತ್ತು ಬೆಳವಣಿಗೆಗೆ ಲಿಂಗರಾಜ ಅರಸರ ಕೊಡುಗೆಯೇ ಕಾರಣ. ಆದ್ದರಿಂದಲೇ ಅವರನ್ನು ತ್ಯಾಗವೀರ ಎಂದು ಕೊಂಡಾಡುವುದು.

ತಮ್ಮ ಮಾವಿನ ತೋಪಿನಲ್ಲಿನ ಮಾವಿನ ಗಿಡಕ್ಕೆ ಕಲ್ಲೆಸೆದು ಮಾವಿನಕಾಯಿ ಪಡೆಯಲು ಯತ್ನಿಸಿದ ರಾಜೇಸಾಬ್ ಒಂಟಿ ಎಂಬ ತಮ್ಮ ತೋಟದ ಕಾವಲುಗಾರನ ಮಗನಿಗೆ ಎರಡು ಎಕರೆ ಜಮೀನು ಕೊಟ್ಟು ಆ ದುಡ್ಡಿನಲ್ಲಿ ಆತನನ್ನು ಓದಿಸಲು ಹೇಳಿದ ಮಹಾದಾನಿ ಲಿಂಗರಾಜ ಅರಸರು. ಕಲ್ಲೆಸದ ಬಾಲಕನಿಗೆ ಹಣ್ಣನ್ನು ಕೊಡುವ ಮರಕ್ಕಿಂತ, ಬುದ್ಧಿಶಕ್ತಿ ಇರುವ ಮಾನವನಾದ ತಾನು ಆತನ ಬದುಕಿಗೆ ದಾರಿ ಮಾಡಿಕೊಡಬೇಕು ಎಂಬ ನಿಲುವನ್ನು ಹೊಂದಿದ್ದರು ಲಿಂಗರಾಜ ಅರಸರು.

ಇಂದಿನ ಗದಗ್ ಜಿಲ್ಲೆಯ ಶಿಗ್ಲಿ ಗ್ರಾಮದ ಮಡ್ಲಿ ಮನೆತನದ ಗೂಳಪ್ಪ ಮತ್ತು ಎಲ್ಲಮ್ಮ ದಂಪತಿಗಳ ಮಗ ರಾಮಪ್ಪ ಗೂಳಪ್ಪ ಮಡ್ಲಿ. ಹುಟ್ಟಿದ್ದು 1861 ರ ಜನವರಿ 10ರಂದು. ಶಿರಸಂಗಿ ದೇಶಗತಿ ಮನೆತನದ ಜಯಪ್ಪ ದೇಸಾಯಿ ಮತ್ತು ಗಂಗಮ್ಮ ದಂಪತಿಗಳು 1872ರ ಜೂನ್ ಎರಡರಂದು ರಾಮಪ್ಪನನ್ನು ದತ್ತಕ ಪುತ್ರನಾಗಿ ಸ್ವೀಕರಿಸಿದ ನಂತರ ಲಿಂಗರಾಜ ಅರಸ ಎಂಬ ಹೆಸರಿನಿಂದ ಕರೆಯಲ್ಪಟ್ಟ. ದತ್ತಕ ತಾಯಿ ಗಂಗಾಬಾಯಿಯ ಅಕ್ಕರಾಸ್ಥೆಯಲ್ಲಿ ಬೆಳೆದ ಲಿಂಗರಾಜ ಮುಂದಿನ ವಿದ್ಯಾಭ್ಯಾಸಕ್ಕಾಗಿ ಕೇವಲ ದೇಶಗತಿ ಮನೆತನದವರು ಮಾತ್ರ ಕಲಿಯುತ್ತಿದ್ದ ಸಾಂಗ್ಲಿ ಸಂಸ್ಥಾನದ ಕೊಲ್ಹಾಪುರದ ಬಳಿಯ ಸರ್ದಾರ್ ಹೈಸ್ಕೂಲಿಗೆ ದಾಖಲಾದರು. ಅಲ್ಲಿ ಕೆ ಪಿ ಪುಟ್ಟಣ್ಣಶೆಟ್ಟಿ, ವಾರದ ಮಲ್ಲಪ್ಪ, ಶಾಹು ಮಹಾರಾಜರು ಮುಂತಾದ ಅಗ್ರಗಣ್ಯರು ಅವರ ಸಹಪಾಠಿಗಳಾಗಿದ್ದರು.

ಎರಡೇ ವರ್ಷಗಳಲ್ಲಿ ಅನಾರೋಗ್ಯಕ್ಕೆ ತುತ್ತಾಗಿ 1874ರಲ್ಲಿ ಗಂಗಮ್ಮನವರು ನಿಧನರಾದರು. ಇನ್ನೋರ್ವ ದತ್ತಕ ತಾಯಿ ಉಮಾಬಾಯಿಯವರಿಗೆ ತನ್ನ ಸೋದರ ಯಲ್ಲಪ್ಪ ನಾಗರಳ್ಳಿಯನ್ನು ದತ್ತಕ ಪಡೆಯಬೇಕೆಂಬ ಪ್ರಬಲ ಇಚ್ಚೆ ಹೊಂದಿದ್ದು ಲಿಂಗರಾಜರ ದತ್ತಕದ ವಿರುದ್ಧ ಕೋರ್ಟಿನ ಮೊರೆ ಹೋದಳು. ಆದರೆ ಲಿಂಗರಾಜರ ಪರವಾಗಿ ಹಲವಾರು ಜನರು ನಿಂತ ಪರಿಣಾಮವಾಗಿ ಅರಮನೆಯ ಹೊರಗಿನಿಂದಲೇ ಅಪಾರ ಬೆಂಬಲ ಪಡೆದ ಲಿಂಗರಾಜರ ದತ್ತಕವನ್ನು ಮುಂಬೈ ಹೈಕೋರ್ಟ್ 1880 ರಲ್ಲಿ ಎತ್ತಿ ಹಿಡಿಯಿತು. ಪರಿಣಾಮವಾಗಿ ಸಗೌರವ ಸಮೇತ ಶಿರಸಂಗಿಯ ದೇಶಗತಿ ಮನೆತನದ ಚುಕ್ಕಾಣಿಯನ್ನು ಲಿಂಗರಾಜರು ಹಿಡಿದರು. ಲಿಂಗರಾಜರು ಮನೆತನದ ವಾಡಿಕೆಯಂತೆ ಇಬ್ಬರು ಕನ್ಯೆಯರನ್ನು ವಿವಾಹವಾದರು, ಅವರೇ ಲಿಂಗಮ್ಮ ಮತ್ತು ಚೆನ್ನಮ್ಮ ಈ ಇಬ್ಬರಿಗೂ ಮಕ್ಕಳಾಗದ ಕಾರಣ ಮತ್ತೆ ಇಬ್ಬರನ್ನು ವಿವಾಹವಾದರೂ ಅವ–ರಿಗೂ ಕೂಡ ಮಕ್ಕಳಾಗಲಿಲ್ಲ. ಹಾಗಾಗಿ ಮೂರನೇ ಬಾರಿ ಮತ್ತೆ ಇಬ್ಬರು ಕನ್ಯೆ ಯರನ್ನು ಮದುವೆಯಾದ ಲಿಂಗರಾಜರಿಗೆ ತಮ್ಮ ಕೊನೆಯ ಪತ್ನಿ ಸುಂದರಬಾಯಿಯವರು ಕೊನೆಯವರೆಗೂ ಜೊತೆಯಾದರು. ಇವರು ಮೊದಲ ಬಾರಿಗೆ ವಿವಾಹವಾದಾಗ ಬೇವೂರಿನ ಕಿಲ್ಲೆಯಲ್ಲಿ ವಾಸವಾಗಿದ್ದ ಉಮಾಬಾಯಿಯು ದತ್ತಕ ಪುತ್ರನನ್ನು ಸೊಸೆಯೊಂದಿಗೆ ಔತಣಕ್ಕೆ ಆಹ್ವಾನಿಸಿದ್ದಳು. ಊಟದಲ್ಲಿ ನಿಧಾನವಿಷವಾದ ಪಾದರಸವನ್ನು ಮಿಶ್ರಣ ಮಾಡಿ ಉಣಬಡಿಸಿದ ಪರಿಣಾಮವಾಗಿ ಲಿಂಗರಾಜರ ಆರೋಗ್ಯ ಹದಗೆಟ್ಟು ಅವರು ಅಲ್ಲಿಯೇ ವಿಷಮ ಶೀತ ಜ್ವರಕ್ಕೆ ತುತ್ತಾದರು. ಪಾರಾದ ಲಿಂಗರಾಜರ ದೇಹದಲ್ಲಿನ ಪಾದರಸವನ್ನು ನಾಟಿ ವೈದ್ಯರು ತೆಗೆದು ಹಾಕಿ ಅವರನ್ನು ಕುತ್ತಿನಿಂದ ಪಾರು ಮಾಡಿದರು.

ಲಿಂಗರಾಜರು ಅತ್ಯುತ್ತಮವಾದ ಆಡಳಿತಗಾರರಾಗಿದ್ದರು. ತಮ್ಮ ಸುಪರ್ದಿಯಲ್ಲಿ ಬರುತ್ತಿದ್ದ ಎಲ್ಲ ಹಳ್ಳಿಗಳಲ್ಲಿಯೂ ಗ್ರಾಮ ಸಭೆಯನ್ನು ನಡೆಸುತ್ತಿದ್ದ ಅವರು ಜನರ ಕಷ್ಟ ಸುಖಗಳಿಗೆ ಕಿವಿಯಾಗುತ್ತಿದ್ದರು. ಜೊತೆಗೆ ಜನರ ಅಹವಾಲುಗಳನ್ನು ನ್ಯಾಯ ತೀರ್ಮಾನಗಳನ್ನು ಕೈಗೊಳ್ಳುವುದರಲ್ಲಿ ಎತ್ತಿದ ಕೈಯಾಗಿದ್ದರು. ಆದ್ದ–ರಿಂದಲೇ ಬ್ರಿಟಿಷರು ಅವರನ್ನು ಸೆಕೆಂಡರಿ ಡಿವಿಷನ್ ಮ್ಯಾಜಿಸ್ಟ್ರೇಟ್ (ನ್ಯಾಯಾಧೀಶ) ಎಂದು ಗೌರವ ಪೂರ್ವಕ ನೇಮಕ ಮಾಡಿದ್ದರು.

ಇದರ ಜೊತೆಗೆ ಲಿಂಗರಾಜರು ಮಾದರಿ ಒಕ್ಕಲುತನಕ್ಕೆ ಹೆಸರಾಗಿದ್ದರು. ಅವರ ಒಕ್ಕಲುತನದಲ್ಲಿ ಸುಧಾರಿತ ಕೃಷಿ ಪದ್ಧತಿಗಳು, ತೋಟಗಾರಿಕಾ ಬೆಳೆಗಳನ್ನು ಬೆಳೆಯುತ್ತಿದ್ದರು.

40ಎತ್ತು , 20ಒಂಟೆ , 100 ಆಕಳು ಗಳು ಅವರ ಒಕ್ಕಲುತನದ ಮುಖ್ಯ ಶಕ್ತಿಗಳಾಗಿದ್ದವು.

ಒಂದು ಬಾರಿ ಬೀಕರ ಬರಗಾಲ



ಉತ್ತರ ಕರ್ನಾಟಕವನ್ನು ನಲುಗಿಸಿದಾಗ ನೀರಾವರಿಯ ಮಹತ್ವವನ್ನು ಅರಿತ ಲಿಂಗರಾಜರು ಶಿರಸಂಗಿಯ ಗ್ರಾಮ ದೇವತೆಯಾದ ಭವಾನಿ ಕೆರೆಯನ್ನು ನಿರ್ಮಿಸಿದರು. ಸುಮಾರು 85 ಎಕರೆ ವಿಸ್ತೀರ್ಣವುಳ್ಳ ಈ ಭವಾನಿಕೆರೆ ನಿರ್ಮಿಸಲು ಸುಮಾರು 2 ಲಕ್ಷ ರೂಗಳಷ್ಟು ಹಣವನ್ನು ಅಂದಿನ ಕಾಲದಲ್ಲಿಯೇ ಅವರು ಖರ್ಚು ಮಾಡಿದ್ದರು. ಇಲ್ಲಿಯೂ ಒಂದು ಸ್ವಾರಸ್ಯಕರ ಘಟನೆಯನ್ನು ನೆನಪು ಮಾಡಿಕೊಳ್ಳಬಹುದು. ಈ ಭವಾನಿ ಕೆರೆಯನ್ನು ಕಟ್ಟುವಾಗ ನೆಟ್ಟು ಕಡಿಯುವ ಸ್ಪರ್ಧೆಯನ್ನು ಏರ್ಪಡಿಸಿದ್ದು ಸುಮಾರು 2000 ಜನ ಇದರಲ್ಲಿ ಭಾಗವಹಿಸಿದ್ದರು. ಸುಮಾರು ಮೂವತ್ತು ರೊಟ್ಟಿ ಒಂದು ದೊಡ್ಡ ಡಬ್ಬರಿ ಅನ್ನ/ಸಂಗಟಿ ಉಣ್ಣುವ ಮಾಯಪ್ಪ ಎಂಬ ಓರ್ವ ವ್ಯಕ್ತಿ ತಲೆ ಎತ್ತದೆ ತನ್ನ ಬೆನ್ನ ಮೇಲೆ ದೊಡ್ಡ ಮಣ್ಣಿನ ಹೆಂಟೆಯೊಂದನ್ನು ಹೇರಿಸಿಕೊಂಡು ಒಂದೇ ಸಮನೆ ನೆಟ್ಟು ಕಡಿಯುತ್ತಾ ಹೋದಾಗ ಆತನ ಬೆವರಿನ ನೀರಿನಿಂದ ಬೆನ್ನ ಮೇಲಿನ ಮಣ್ಣಿನ ಹೆಂಟೆ ಕರಗಿ ನೆಲ ಸೇರಿದ್ದನ್ನು ಇಂದಿಗೂ ಆ ಭಾಗದ ಜನರ ಬಾಯಲ್ಲಿ ದಂತಕತೆಯಾಗಿ ನಿರೂಪಣೆಗೊಳ್ಳುತ್ತದೆ. ಹಾಗೆ ನೆಟ್ಟು ಕಡೆದ ಮಾಯಪ್ಪನಿಗೆ ಎರಡು ಎಕರೆ ಜಮೀನನ್ನು ಬಹುಮಾನ ರೂಪವಾಗಿ ಲಿಂಗರಾಜ ಅರಸರು ನೀಡಿದರು.

ತದನಂತರ ಇಂದು ಜೋಗುಳ ಬಾವಿ ಎಂದು ಕರೆಯಲ್ಪಡುವ ಸವದತ್ತಿ ಭಾಗದಲ್ಲಿರುವ ಹೊಸಬಾಳು ಕೆರೆಯನ್ನು ಲಿಂಗರಾಜರು ನಿರ್ಮಿಸಿದರು. ಸವದತ್ತಿ ಎಲ್ಲಮ್ಮನ ಗುಡ್ಡದ ಸುತ್ತಲಿರುವ ಏಳುಕೊಳ್ಳಗಳ ಮಳೆ ನೀರು ಸಂಗ್ರಹವಾಗಿ ಬೀಳುವಂತೆ ತಾವರೆಕೆರೆ ಬಾಂದಾರ ವನ್ನು ಕೂಡ ಅವರು ನಿರ್ಮಿಸಿದರು.

ಲಿಂಗರಾಜರ ಕೃಷಿ ಕಾರ್ಯ ಮತ್ತು ನ್ಯಾಯ ನಿರ್ಣಯ ಶಕ್ತಿಯನ್ನು ಕಂಡ ಅಂದಿನ ಬ್ರಿಟಿಷ್ ಸರ್ಕಾರವು ಅವರನ್ನು ಎಡ್ವರ್ಡ್ ದೊರೆಯ ಪಟ್ಟಾಭಿಷೇಕ ಮಹೋತ್ಸವದ ದೆಹಲಿ ಸಿಂಹಾಸನಾರೋಹಣ ಕಾರ್ಯಕ್ರಮಕ್ಕೆ ಆಹ್ವಾನಿಸಿತು ಹಾಗೆ ಭಾರತ ದೇಶದಿಂದ ಬ್ರಿಟಿಷ್ ಸಾಮ್ರಾಜ್ಯದ ಆಹ್ವಾನ ಪಡೆದ ಏಕೈಕ ವ್ಯಕ್ತಿ ಲಿಂಗರಾಜ ಅರಸರು ಮಾತ್ರ.

ಮುಂದೆ ಅಥಣಿಯ ಶಿವಯೋಗಿಗಳಿಂದ ಲಿಂಗ ದೀಕ್ಷೆ ಪಡೆದ ಲಿಂಗರಾಜ ಅರಸರು 1883 ರಲ್ಲಿ ತಮ್ಮ ಆತ್ಮಸಖ ಅರಟಾಳ್ ರುದ್ರಗೌಡರ ಜೊತೆಗೂಡಿ ಲಿಂಗಾಯತ ಎಜುಕೇಶನ್ ಸೊಸೈಟಿಯನ್ನು ಸ್ಥಾಪಿಸಿದರು. ಇವರ ಜೊತೆಗೆ ಕಿತ್ತೂರು ರೇವಣಸಿದ್ದಪ್ಪ, ರಾಜ ಲಖಮಗೌಡರು ಮುಂತಾದವರು ಜೊತೆಗೂಡಿದರು. ಅಮ್ಮಣಗಿ ಗ್ರಾಮದಲ್ಲಿ ಸುಮಾರು 1400 ಎಕರೆ ಜಮೀನನ್ನು ಲಿಂಗಾಯತ ಎಜುಕೇಶನ್ ಸೊಸೈಟಿಯ ಅಭಿವೃದ್ಧಿಗೆ ಲಿಂಗರಾಜ ಅರಸರು ಮೀಸಲಿಟ್ಟರು. 1894 ರಲ್ಲಿ ಏಳೂರು ಗೌಡರ ಸಹಕಾರ ಅಡತಿ ಅಂಗಡಿ ಯನ್ನು ಸ್ಥಾಪಿಸಿದ ಲಿಂಗರಾಜ ಅರಸರು ಬೈಲಹೊಂಗಲದ ಜಿನ್ನಿಂಗ್ ಫ್ಯಾಕ್ಟರಿಯಲ್ಲಿ 30 ಶೇಕಡ ಶೇರುಗಳನ್ನು ಖರೀದಿಸಿದರು.

1902 ರಲ್ಲಿ ಹಾನಗಲ್ಲ ಗುರು ಕುಮಾರಸ್ವಾಮೀಜಿಯವರ ಆಶಯದಂತೆ ಸ್ನೇಹಿತ ಅರಟಾಳ್ ರುದ್ರಗೌಡ, ಮರೇವಾಡ ಗದಿಗೆಯ್ಯ, ಕಿತ್ತೂರು ರೇವಣಸಿದ್ದಪ್ಪ, ಕೂಗನೂರು ಇವರ ಜೊತೆಯಲ್ಲಿ ಕುದುರೆ ಸಾರೋಟಿನಲ್ಲಿ ಪ್ರವಾಸ ಮಾಡಿ ವೀರಶೈವ ಲಿಂಗಾಯತರನ್ನು ಒಗ್ಗೂಡಿಸುವ ಕೆಲಸವನ್ನು ಮಾಡಿದರು.

1904ರ ಮೇ 13 14 ಮತ್ತು 15 ರಂದು ಪ್ರಥಮ ವೀರಶೈವ ಅಖಿಲ ಭಾರತ ಮಹಾಸಭಾ ಸಮ್ಮೇಳನವು ಹಾನಗಲ್ಲಿನ ಕುಮಾರಸ್ವಾಮಿಗಳ ಮಾರ್ಗದರ್ಶನದಲ್ಲಿ ಲಿಂಗರಾಜ ಅರಸರ ಸಂಸ್ಥಾಪಕ ಅಧ್ಯಕ್ಷತೆಯಲ್ಲಿ ನಡೆಯಿತು ಸುಮಾರು 3000ಕ್ಕೂ ಹೆಚ್ಚು ಜನ ಸೇರಿದ ಈ ಸಮ್ಮೇಳನದಲ್ಲಿಯೂ ಕೂಡ ಲಿಂಗರಾಜ ಅರಸರು 5,000 ರೂಗಳನ್ನು ಲಿಂಗಾಯತ ಸಮಾಜದ ಅಭಿವೃದ್ಧಿಗೆ ನೀಡಿದರು.

ಈ ಸಮ್ಮೇಳನದಲ್ಲಿ ಮುಖ್ಯವಾಗಿ ವಿಧವಾ ವಿವಾಹ, ಸರಳ ವಿವಾಹ, ಸ್ತ್ರೀ ಶಿಕ್ಷಣ, ಸಾಗರದಾಚೆಯ ಶಿಕ್ಷಣ–ಕ್ಕೆ ಆದ್ಯತೆ, ವೀರಶೈವ ವೇದಿಕ ಪಾಠಶಾಲೆಗಳು ಕುರಿತಾಗಿ ಅತ್ಯಂತ ಪ್ರಬುದ್ಧವಾಗಿ ವಿಷಯಗಳನ್ನು ಪ್ರಸ್ತಾಪಿಸಿದ ಲಿಂಗರಾಜರು ಅವುಗಳ ಅನುಷ್ಠಾನಕ್ಕೆ ಒತ್ತಾಯಿಸಲು ಕ್ರಮ ಕೈಗೊಂಡರು. ಇದರ ಜೊತೆಗೆ ಕೋರ್ಟಿನ ಹೊರಗಡೆ ಸಮಾಜದ ಹಿರಿಯರ ಸಮ್ಮುಖದಲ್ಲಿ ನ್ಯಾಯ ಸಭೆ ನಡೆಸಿ ತಮ್ಮ ವ್ಯಾಜ್ಯಗಳನ್ನು ಬಗೆಹರಿಸಿಕೊಳ್ಳಲು ಒತ್ತಾಯಿಸಿದರು.

ವೀರಶೈವ ಧರ್ಮದ ಉಳಿವಿಗೆ ಜಂಗಮ ಪಾಠಶಾಲೆಗಳ ಅವಶ್ಯಕತೆಯನ್ನು ಮನಗಂಡು ಜಂಗಮ ಪಾಠಶಾಲೆಗಳನ್ನು ಪ್ರಾರಂಭಿಸಲು ಒತ್ತಾಯಿಸಿ ಮುಂದೆ 1908ರಲ್ಲಿ ಬಾದಾಮಿಯಲ್ಲಿ ಶಿವಯೋಗ ಮಂದಿರವನ್ನು ಸ್ಥಾಪಿಸಲು ಕಾರಣಿಭೂತರಾದರು

1905ರ ಜುಲೈ 13, 14 ಮತ್ತು 15 ರಂದು ಬೆಂಗಳೂ–ರಿನಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಾಸಭಾ ಎರಡನೇ ಸಮ್ಮೇಳನವನ್ನು ಪುಟ್ಟಣ್ಣ ಶೆಟ್ಟಿಯವರ ನೇತೃತ್ವದಲ್ಲಿ ಲಿಂಗರಾಜ ಅರಸರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಅಲ್ಲಿಯೂ ಕೂಡ ಲಿಂಗರಾಜ ಅರಸರು 2, 000ರೂಗಳನ್ನು ದೇಣಿಗೆಯಾಗಿ ನೀಡಿದರು. ಇವರ ದಾನ ಗುಣವನ್ನು ಕಂಡ ಅಂದಿನ ಮೈಸೂರಿನ ಅರಸರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರಿನ ತಮ್ಮ ಸಂಸ್ಥಾನಕ್ಕೆ ಲಿಂಗರಾಜ ಅರಸರನ್ನು ಆಮಂತ್ರಿಸಿ ಗೌರವ ಸನ್ಮಾನ ಮಾಡಿದರು.

ತಮ್ಮ ಸಂಸ್ಥಾನಕ್ಕೆ ಸೇರಿದ ಸರಿ ಸುಮಾರು 5,72,156 ಎಕರೆ ಜಮೀನನ್ನು ದಾನ ಮಾಡಿದ ಲಿಂಗರಾಜ ಅರಸರು ತಮ್ಮ ಸುಪರ್ದಿಯಲ್ಲಿದ್ದ 9ಕ್ಕೂ ಹೆಚ್ಚು ಸಂಧೂಕಗಳಲ್ಲಿನ ಚಿನ್ನ ಬೆಳ್ಳಿ ರತ್ನಗಳನ್ನು ಮತ್ತು ಸಾವಿರಾರು ರೂಗಳಷ್ಟು ಹಣವನ್ನು ಸಮಾಜದ ಒಳಿತಿಗೆ ದಾನವಾಗಿ ನೀಡಿದರು.

ಇಂದಿನ ಪ್ರತಿಷ್ಠಿತ ಕೆ ಎಲ್ ಇ ಸೊಸೈಟಿ, ಬಿ ಎಲ್ ಡಿ ಈ ಸಂಸ್ಥೆಗಳಿಗೆ ದೇವಿ ಹೊಸೂರಿನಲ್ಲಿ ಕೃಷಿ ತರಬೇತಿಗಾಗಿ ಭೂದಾನ ಮಾಡಿದ ಲಿಂಗರಾಜ ಅರಸರು ಕಾಶಿಯ ಜಂಗಮವಾಡಿ ಮಠ, ರಾಮೇಶ್ವರದ ದೇವಸ್ಥಾನಗಳಿಗೆ ಕೂಡ ಭೂದಾನ ಮಾಡಿದರು. ನವಲಗುಂದದ ಸೂಫಿ ಸಂತ ಸೈಯದ್ ಅಮೀನ್ ಶಾ ಹುಸೇನ್ ಅವರಿಗೆ ಭೂದಾನ ಮಾಡಿದ್ದಲ್ಲದೆ,ಅಜ್ಮೀರದ ಸಂತ ಮೈನುದ್ದಿನ್ ಚಿಸ್ತಿ ಅವರಿಗೆ ಪಾರಿವಾಳ ಸಾಕಲು ಕೂಡ ಭೂದಾನ ಮಾಡಿದ ಲಿಂಗರಾಜ ಅರಸರು ಸಿರಸಂಗಿ ವಾಡೆಯಲ್ಲಿ ದೀವಟಿಗೆ ಹಿಡಿಯುವ ಕೆಲಸ ಮಾಡುತ್ತಿದ್ದ ವ್ಯಕ್ತಿಗೂ ಮಾವಿನ ತೋಪಿಗೆ ಕಲ್ಲೆಸದ ಮುಸಲ್ಮಾನ ಬಾಲಕನಿಗೂ ಕೂಡ ಭೂದಾನ ಮಾಡಿದ ಮಹಾದಾನಿ. ಪತ್ರಿವನ ಮಠ, ಶಿರಸಂಗಿಯ ಕಾಳಿಕಾದೇವಿಯ ಪೂಜಾರಿಕೆಗೆ ಕೂಡ ಭೂದಾನ ಮಾಡಿದರು ಲಿಂಗರಾಜ ಅರಸರು.

1906 ರಲ್ಲಿ ತಮ್ಮ ಹೊಲದಲ್ಲಿ ನಡೆಯುತ್ತಿದ್ದ ವ್ಯವಸಾಯ ಕಾರ್ಯದ ಕ್ಷೇತ್ರ ವೀಕ್ಷಣೆ ಮಾಡುತ್ತಿರುವಾಗ ತೀವ್ರವಾದ ಹೊಟ್ಟೆ ನೋವು ಕಾಣಿಸಿಕೊಂಡು ಅವರ ಆರೋಗ್ಯ ಕ್ಷೀಣಿಸಿತು ಯಾವುದೇ ಔಷದೋಪಚಾರಕ್ಕೆ ಬಗ್ಗದ ಅವರ ದೇಹಾರೋಗ್ಯ 1906ರ ಮಾರ್ಚ್ ತಿಂಗಳಲ್ಲಿ ಮತ್ತಷ್ಟು ಹದಗೆಟ್ಟು ಅವರು ನಿಧನ ಹೊಂದಿದರು. ಅವರ ಸಮಾಧಿಯನ್ನು ಈಗಿನ ಧಾರವಾಡ ಜಿಲ್ಲೆಯ ನವಲಗುಂದದಲ್ಲಿ ಮಾಡಲಾಗಿದ್ದು, ಅಲ್ಲಿ ಇಂದಿಗೂ ಲಿಂಗರಾಜರು ಭಕ್ತ–ರಿಂದ ಪೂಜೆಗೊಳ್ಳುತ್ತಿದ್ದಾರೆ. ಅವರು ಸಮಾಧಿಗೊಂಡ ಸ್ಥಳವನ್ನು ಥಡಿ ಮಠ ಎಂದು ಕರೆಯಲಾಗುತ್ತಾರೆ

ಕರ್ನಾಟಕದ ಎಲ್ಲ ಮಠಮಾನ್ಯಗಳಿಗೆ, ಶಿಕ್ಷಣ ಸಂಸ್ಥೆಗಳಿಗೆ, ಕೃಷಿ ಭೂಮಿಯನ್ನು ಚಿನ್ನ ಒಡವೆ ಹಣದ ಸಹಾಯ ಮಾಡಿದ ಮಹಾದಾನಿ ಶಿರಸಂಗಿ ಲಿಂಗರಾಜರನ್ನು 1907ರಲ್ಲಿ ಸೊಲ್ಲಾಪುರದಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಾಸಭಾ ಮೂರನೇ ಸಮ್ಮೇಳನದಲ್ಲಿ 64ನೇ ವೀರಶೈವ ಪುಣ್ಯ ಪುರುಷ ಎಂದು ಮರಣೋತ್ತರವಾಗಿ ಘೋಷಿಸುವ ಮೂಲಕ ಗೌರವಿಸಲಾಯಿತು.

ಅವರ ಮರಣದ ನಂತರ ಅವರ ಉಯಿಲು ಪತ್ರವನ್ನು ಅವರ ಸ್ನೇಹಿತ ಅರಟಾಳ ರುದ್ರಗೌಡರ ನೇತೃತ್ವದಲ್ಲಿ ಬ್ರಿಟಿಷ್ ಅಧಿಕಾರಿಗಳು ಮತ್ತು ಸಮಾಜದ ಮುಖಂಡರ ಸಮ್ಮುಖದಲ್ಲಿ ತೆರೆದು ಓದಲಾಯಿತು. ಅದರ ಮುಖ್ಯ ಅಂಶಗಳಲ್ಲಿ ತಮ್ಮ ಸ್ನೇಹಿತ ಅರಟಾಳ ರುದ್ರಗೌಡರು, ಸತ್ಯಪ್ಪ ಗಾಳಿ, ರೇವಣಪ್ಪ ಕಿತ್ತೂರ್, ಭೀಮನಗೌಡ ಪಾಟೀಲ್, ಉಕ್ಕಲಿಯ ರಾಯನಗೌಡ ಇಂಗಳೇಶ್ವರ, ತಿಕೋಟಾದ ತಿಮ್ಮನಗೌಡ ಪಾಟೀಲ್, ಮಲ್ಲಿಕಾರ್ಜುನ್ ರೈನಾಪುರ್ ಇವರನ್ನು ಕಾರ್ಯಕಾರಿ ಮಂಡಳಿಯ ಸದಸ್ಯರನ್ನಾಗಿಸಿ ನವಲಗುಂದ–ಶಿರಸಂಗಿ ಟ್ರಸ್ಟ್ ಫಂಡ, ಬೆಳಗಾವಿ ಹೆಸರಿನಲ್ಲಿ ತಮ್ಮ ಜಂಗಮ ಮತ್ತು ಸ್ಥಾವರ ಆಸ್ತಿಯಿಂದ ಬರುವ ಎಲ್ಲಾ ಉತ್ಪನ್ನವನ್ನು ಟ್ರಸ್ಟಿಗೆ ಜಮಾ



ತ್ಯಾಗವೀರ ಸಿರಸಂಗಿ ಶ್ರೀ ಲಿಂಗರಾಜ ದೇಸಾಯಿ
10.01.1861 – 23.08.1906

ತೆಗೆದುಕೊಂಡು ಆ ಟ್ರಸ್ಟ್ ಫಂಡಿನ ಹಣವನ್ನು ಯಾವತ್ತೂ ಲಿಂಗವಂತ ಸಮಾಜದ ಮಕ್ಕಳ ವಿದ್ಯಾಭ್ಯಾಸಕ್ಕೆ ವಿನಿಯೋಗಿಸಬೇಕು ತಮ್ಮ ಪತ್ನಿ ಸುಂದರಾಬಾಯಿಗೆ ಪ್ರತಿ ತಿಂಗಳು ಒಂದು ನೂರು ರೂಪಾಯಿಗಳನ್ನು ಟ್ರಸ್ಟ್ ನಿಂದ ಕೊಡತಕ್ಕದ್ದು ಎಂದು ಬರೆದಿದ್ದರು.

ಉಯಿಲಿನ ಲಿಖಿತವನ್ನು ಕೇಳಿದ ಅಂದಿನ ಬ್ರಿಟಿಷ್ ಅಧಿಕಾರಿ ಜಾಕ್ಸನ್ ಮೂಕ ವಿಸ್ಮಿತನಾಗಿ ಇಂತಹ ದಾನಿಗಳು ಸಮಾಜದಲ್ಲಿ ಸಾವಿರಾರು ವರ್ಷಕ್ಕೆ ಒಬ್ಬರು ಮಾತ್ರ ಸಿಗುತ್ತಾರೆ ಎಂದು ಗದ್ಗದಿತನಾಗಿ ಉದ್ಧರಿಸಿದನು. ಇಂದಿಗೂ ಕೂಡ ಇಂಗ್ಲೆಂಡಿನ ಬ್ರಿಟಿಷ್ ಮ್ಯೂಸಿಯಂನಲ್ಲಿ ಲಿಂಗರಾಜರ ಭಾವಚಿತ್ರ ಮತ್ತು ಅವರ ದಾನ ಪತ್ರವನ್ನು ಮುಕ್ತ ಪ್ರದರ್ಶನಕ್ಕೆ ಇಡಲಾಗಿದೆ.

ಲಕ್ಷಾಂತರ ವಿದ್ಯಾರ್ಥಿಗಳು ಓದುತ್ತಿರುವ ಸಪ್ತರ್ಷಿಗಳೆಂದೇ ಹೆಸರುವಾಸಿಯಾದ ಏಳು ಜನ ಸೇರಿ ಸ್ಥಾಪಿಸಿದ ಕೆಎ□□□ ಟ್ರಸ್ಟ್ ತನ್ನ ಮೊದಲ ಕಾಲೇಜಿಗೆ ಲಿಂಗರಾಜ ಕಾಲೇಜ ಎಂದು ಹೆಸರಿಸಿ ಲಿಂಗರಾಜ ಅರಸರಿಗೆ ಗೌರವ ಸಲ್ಲಿಸಿದೆ.

ಲಿಂಗರಾಜರು ಪಂಚಭೂತಗಳಲ್ಲಿ ಲೀನವಾಗಿರಬಹುದು ಆದರೆ ಅವರು ಹಚ್ಚಿದ ಜ್ಞಾನ ಜ್ಯೋತಿಯ ಕಿರಣಗಳು ಪ್ರಪಂಚದ ಎಲ್ಲ ದೇಶಗಳಲ್ಲಿ ಹರಡಿ ಭವ್ಯ ಬೆಳಕನ್ನು ಹರಡಿವೆ, ಮುಂದೆಯೂ ಹರಡುತ್ತಲೇ ಸಾಗುತ್ತದೆ.

ತ್ಯಾಗವೀರ ಲಿಂಗರಾಜ ಅರಸರ ಈ ದಾನ ಕೋಟ್ಯಾಂತರ ವಿದ್ಯಾರ್ಥಿಗಳ ಭವ್ಯ ಭವಿಷ್ಯಕ್ಕೆ ದಾರಿ ಮಾಡಿಕೊಟ್ಟಿದೆ. ಇಂತಹ ಪುಣ್ಯ ಪುರುಷನನ್ನು ಪಡೆದ ಆ ತಾಯಿ ಕನ್ನಡಮ್ಮ ಧನ್ಯಳಾಗಿದ್ದಾಳೆ.

ಇಂತಹ ಪುಣ್ಯ ಪುರುಷರು ಮತ್ತೆ ಮತ್ತೆ ಹುಟ್ಟಿ ಈ ಭರತ ಭೂಮಿಯನ್ನು ಪಾವನ ಮಾಡಲಿ ಎಂದು ಆಶಿಸುವ..

**Printed by:** AVINASH BIDARI, **Published and Onwed by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR